ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 53 | ಡಿಸೆಂಬರ್ 30, 1984 | ಬೆಲೆ 60 ಪೈಸೆ.

ಕಾಂಗ್ರೈ ಪೊಳ್ಳು ಘೋಷಣೆಗಳಿಗೆ ಮತ್ತೊಮ್ಮೆ ಮರುಳಾದ ಮತದಾರರು

8ನೇ ಲೋಕಸಭಾ ಚುನಾವಣೆಯಲ್ಲಿ ಈಗಿನ ಅಂದಾಜುಗಳ ಪ್ರಕಾರ, ಸ್ವಾತಂತ್ರ್ಯನಂತರದ ಭಾರತದಲ್ಲಿ, ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸಿದ್ದಾರೆ. ಈ ಮತದಾನ ಪ್ರಮಾಣ ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕರ್ನಾಟಕಗಳಲ್ಲಿ ಸ್ಪಷ್ಟವಾಗಿ ಹೆಚ್ಚಾಗಿದೆ. ಇಂದಿರಾ ಹತ್ಯೆಯ ನಂತರ, ನಮ್ಮ ದೇಶದ ಜನತೆಯಲ್ಲಿ, ಭಾರತದ ಐಕ್ಯತೆ ಮತ್ತು ಸಮಗ್ರತೆಯ ಬಗ್ಗೆ ಉಂಟಾಗಿರುವ ಕಾಳಜಿಯನ್ನು ಸೂಚಿಸುವಂತೆ ಕಾಣುತ್ತದೆ.

ಈ ಹೆಚ್ಚಿದ ಮತದಾನದ ಪ್ರಯೋಜನ ರಾಷ್ಟ್ರದಲ್ಲಿ ಎಲ್ಲಾ ಕಡೆ ಕಾಂಗ್ರೆಸ್ (ಐ) ಗೆ ದಕ್ಕಿರುವುದು ಸ್ಪಷ್ಟವಾಗಿದೆ.

1967 ರ ಚುನಾವಣೆಗಳಲ್ಲಿನ ಕಹಿ ಅನುಭವದ ನಂತರ 1971 ರಲ್ಲಿ ಕಾಂಗ್ರೆಸ್ ಪಕ್ಷ ತಯಾರಿಸಿದ "ಗರೀಬಿ ಹಟಾವೋ" ನ ಪೊಳ್ಳು ಘೋಷಣೆಯಿಂದ 1980 ರಲ್ಲಿ "ಕೆಲಸ ಮಾಡುವ ಸರ್ಕಾರ" ದ ಘೋಷಣೆಯಿಂದ ವಂಚಿಸಲ್ಪಟ್ಟ ಭಾರತದ ಮತದಾರರು ಈ ಚುನಾವಣೆಯಲ್ಲಿ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸುವಲ್ಲಿ ನಾವೊಬ್ಬರೇ ಸಮರ್ಥರು ಎಂಬ ಕಾಂಗ್ರೆಸ್ (ಐ) ನ ಘೋಷಣೆಗೆ ಮತ್ತೊಮ್ಮೆ ಮರುಳಾಗಿದ್ದಾರೆ. ಈ ಪರಿಸ್ಥಿತಿಗೆ ನಮ್ಮ ಬಂಡವಾಳಶಾಹಿ ವಿರೋಧ ಪಕ್ಷಗಳೂ ಕೂಡ, ಬಹಳ ಮಟ್ಟಿಗೆ ಕಾರಣ. ಭಾರತದಲ್ಲಿ ಇಂದು ಉಂಟಾಗಿರುವ ಗಂಡಾಂತರಕಾರಿ ಪರಿಸ್ಥಿತಿಗೆ ಮೂಲವಾದ ಕಾಂಗ್ರೆಸ್ (ಐ)ನ ದಿವಾಳಿಕೋರ ನೀತಿಯನ್ನು ಬಯಲಿಗೆಳೆದು ಭಾರತದಲ್ಲಿ ಬೆಳೆಯುತ್ತಿರುವ ದೇಶಭಂಜಕ ಕೋಮುವಾದಿ, ಮತೀಯವಾದಿ ಶಕ್ತಿಗಳೊಡನೆ ಸಖ್ಯ ಸ್ಥಾಪಿಸಿಯಾದರೂ ಅಧಿಕಾರದಲ್ಲಿ ಮುಂದುವರಿಯಬೇಕೆನ್ನುವ ಕಾಂಗ್ರೆಸ್ [ಐ]ಗೆ ನಮ್ಮ ದೇಶವನು ರಕ್ಷಿಸುವ ಶಕ್ತಿಯಿಲ್ಲ ಎನ್ನುವುದನ್ನು ಭಾರತದ ಮತದಾರರಿಗೆ ಮನವರಿಕೆ ಮಾಡುವಲ್ಲಿ ಈ ಬಂಡವಾಳಶಾಹಿ ವಿರೋಧ ಪಕ್ಷಗಳು ವಿಫಲವಾದುವು. ಮಾತ್ರವಲ್ಲ ನಮ್ಮ ದೇಶಕ್ಕೆ ಇರುವ ಅಪಾಯವನ್ನೇ "ಇದು ಕೇವಲ ಕಾಂಗ್ರೈನ ಬೊಬ್ಬೆ ಅಷ್ಟೆ" ಎಂದು ಅಲ್ಲಗೆಳೆಯಲು ಪ್ರಯತ್ನಿಸಿದುವು. ಅದರ ಪರಿಣಾಮವಾಗಿಯೇ ಭಾರತದ ಅನೇಕ ರಾಜ್ಯಗಳಲ್ಲಿ ಸೋಲನ್ನುಂಡವು.

ಸಿ ಪಿ ಐ (ಎಂ) ನಿಂದ ಪ್ರಬಲ ಪ್ರತಿರೋಧ

ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತದಲ್ಲಿನ ಗಂಡಾಂತರದ ಪರಿಸ್ಥಿತಿಯ ಆಳ ಅಗಲಗಳು, ಈ ಪರಿಸ್ಥಿತಿಗೆ ಕಾರಣವಾದ ಶಕ್ತಿಗಳು ಇವುಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯಿಂದ, ಕಾಂಗ್ರೆಸ್ [ಐ] ದಿವಾಳಿಕೋರ ಆರ್ಥಿಕ ನೀತಿಗಳು, ರಾಜಕೀಯ ಸ್ವಾರ್ಥಗಳೇ ಈ ಪರಿಸ್ಥಿತಿಗೆ ಕಾರಣ. ವಿರೋಧ ಪಕ್ಷಗಳ ದೆಹಲಿ, ಶ್ರೀನಗರ, ಕಲ್ಕತ್ತಾ ಸಮಾವೇಶಗಳಲ್ಲಿ ರೂಪಿತವಾದ ಪರ್ಯಾಯ ಧೋರಣೆಗಳೇ ಇದಕ್ಕೆ ಸೂಕ್ತ ಪರಿಹಾರ. ಈ ಪರ್ಯಾಯ ಧೋರಣೆಗಳನ್ನು ಮುಂದಿಟ್ಟುಕೊಂಡ ಪಕ್ಷಗಳ ಒಕ್ಕೂಟವೇ ನಮ್ಮ ದೇಶದ ಐಕ್ಯತೆಯನ್ನು ರಕ್ಷಿಸಲು ಶಕ್ತ ಎಂದು ಪ್ರತಿಪಾದಿಸಿದ್ದರ ಫಲವಾಗಿ ತನ್ನ ಭದ್ರನೆಲೆಗಳಾದ ತ್ರಿಪುರಾ ಪಶ್ಚಿಮ ಬಂಗಾಲಗಳಲ್ಲಿ ಪ್ರಬಲ ಪ್ರತಿರೋಧವನ್ನು ತೋರಿಸಲು ಸಾಧ್ಯವಾಗಿದೆ ಕೇರಳದಲ್ಲಿ ಕೂಡ ನಮ್ಮ ಪಕ್ಷದ ಮತ ಬೆಂಬಲ ಕಡಿಮೆಯಾಗಿಲ್ಲವೆಂದು ತಕ್ಷಣದ ಲೆಕ್ಕಾಚಾರ ಸಾಬೀತು ಪಡಿಸುತ್ತದೆ. ಕೇರಳದಲ್ಲಿ 1982 ರ ಚುನಾವಣೆಗಳಿಗಿಂತ ಶೇ 14 ರಷ್ಟು ಹೆಚ್ಚಿನ ಮತದಾನವಾಗಿದೆ. ಅಂದರೆ ಒಂದೊಂದು ಕ್ಷೇತ್ರದಲ್ಲಿಯೂ 80,000 ದಿಂದ ಒಂದು ಲಕ್ಷದವರೆಗೆ ಹೆಚ್ಚಿನ ಮತದಾನವೆಂದರ್ಥ ಆದರೂ ಕೇರಳದಲ್ಲಿ ನಮ್ಮ ಪಕ್ಷಕ್ಕಿಂತ ಯು ಡಿ ಎಫ್ ಅಭ್ಯರ್ಥಿಗಳುಗಳಿಸಿರುವ ಹೆಚ್ಚಿನ ಮತ ದೇಶದ ಇತರ ಕಡೆಗಳಲ್ಲಿ ಹೋಲಿಸಿದರೆ ಅತ್ಯಂತ ಕಡಿಮೆ. ಸುಲೇಮಾನ್ ಸೇಟರು ಗಳಿಸುತ್ತಿದ್ದ ಒಂದೂವರೆ ಲಕ್ಷದ ಬಹುಮತ ಅರ್ಧ ಲಕ್ಷಕ್ಕಿಳಿದಿದೆ.

ಕಾಂಗ್ರೆಸ್ (ಐ) ಸ್ಪರ್ಧಿಗಳೇ ಗೆಲ್ಲುತ್ತಿದ್ದ ಮೂವತ್ತು ಪುಳಾದಲ್ಲಿ ಮಾತ್ರ 95,000. ಅಂದರೆ ನಮ್ಮ ಅಭ್ಯರ್ಥಿಗಳು ತಮ್ಮ ಮತ ಬ್ಯಾಂಕನ್ನು ಉಳಿಸಿಕೊಂಡಿದ್ದಾರೆ. ದೇಶದ ಇತರೆಡೆಗಳಲ್ಲಿನ ಅನೇಕ ವಿರೋಧ ಪಕ್ಷಗಳು ಲಕ್ಷಗಟ್ಟಲೆ ಮತಗಳಿಂದ ಅನುಭವಿಸಿರುವ ಸೋಲಿನ ಹಿನ್ನೆಲೆಯಲ್ಲಿ ನಮ್ಮ ಪಕ್ಷ ಒಡ್ಡಿದ ಪ್ರತಿರೋಧ ಗಮನಾರ್ಹ ಪಶ್ಚಿಮ ಬಂಗಾಳದಲ್ಲಿ ಇಡೀ ದೇಶದಲ್ಲಿಯೇ ಅತ್ಯಂತ ಹೆಚ್ಚಿನ ಮತ ಚಲಾವಣೆಯಾದರೂ ಎಡರಂಗದ ಮೀಸಲು ಮತ ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ ಮಾತ್ರವಲ್ಲ ಹೆಚ್ಚಿಸಿಕೊಂಡಿದ್ದಾರೆ. ಬಹಳಷ್ಟು ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಉಳಿದವುಗಳಲ್ಲಿ ಹೆಜ್ಜೆ ಹೆಜ್ಜೆಗೂ ಕಾಂಗ್ರೆಸ್ (ಐ) ಅಭ್ಯರ್ಥಿಗಳಿಗೆ ಪ್ರಬಲ ಪ್ರತಿರೋಧ ನೀಡುತ್ತಿದ್ದಾರೆ. ದೇಶದ ಐಕ್ಯತೆಗೆ ಧಕ್ಕೆ ತರುವ ವಿಭಜಕ ಶಕ್ತಿಗಳ ಅಪಾಯ ತಲೆದೋರಿರುವ, ಈ ಶಕ್ತಿಗಳೊಡನೆ ಕಾಂಗ್ರೆಸ್ (ಐ) ಅನೈತಿಕ ಮೈತ್ರಿ ಬೆಳೆಸಿರುವ ಗಡಿನಾಡು ತ್ರಿಪುರಾದಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ನಿಸ್ಸಂದೇಹ ಜಯಗಳಿಸಿದ್ದಾರೆ.

ತೆಲುಗು ದೇಶಂ

ಕಾಂಗ್ರೆಸ್ (ಐ) ಗೆ ಪ್ರಬಲ ಪ್ರತಿರೋಧ ಕಂಡು ಬಂದ ಇನ್ನೊಂದು ರಾಜ್ಯ ಆಂಧ್ರ ಪ್ರದೇಶ. ಕಾಂಗ್ರೆಸ್ (ಐ) ನ ಅಧಿಕಾರ ದಾಹ, ಎಲ್ಲ ಕಡೆ ತಾನೇ ಆಳಬೇಕೆನ್ನುವ ಸರ್ವಾಧಿಕಾರದ ಕಾಂಗ್ರೈಗೆ ಯಾವ ವಿರೋಧವನ್ನು ಸಹಿಸದ ಕಾಂಗ್ರೆಸ್ (ಐ) ನ ಪ್ರಜಾಪ್ರಭುತ್ವ ವಿರೋಧಿ ನೀತಿಗೆ ವಿರುದ್ಧವಾಗಿ, ಇಡೀ ರಾಜ್ಯದ ಜನತೆಯ್ಯೆ ಎದ್ದುನಿಂತು ಪ್ರತಿಭಟಿಸಿದ್ದರ ಫಲವಾಗಿ ಮತದಾರರಲ್ಲಿ ಮೂಡಿದ ಪ್ರಜ್ಞೆಯ ಪರಿಣಾಮ ಅದು.

ಕರ್ನಾಟಕದಲ್ಲಿ

ಇನ್ನು ನಮ್ಮ ರಾಜ್ಯದಲ್ಲಿ ಕೂಡ ಸ್ವಾತಂತ್ರ್ಯ ನಂತರದ ಅತಿ ಹೆಚ್ಚಿನ ಮತದಾನ ಶೇ 65.88 ರಷ್ಟು ಆಗಿದೆ, ಇದು 1980 ರ ಚುನಾವಣೆಗಳಿಗಿಂತ ಶೇ 9 ರಷ್ಟು ಹೆಚ್ಚು. ಆದರೂ ಜನತಾ ಪಕ್ಷ ನಾಲ್ಕು ಸ್ಥಾನಗಳಲ್ಲಿ ಜಯಗಳಿಸಿರುವುದೇ ಅಲ್ಲದೆ 83 ರ ವಿಧಾನ ಸಭಾ ಚುನಾವಣೆಗಳಿಗೆ ಹೋಲಿಸಿದರೆ ಜನತಾ ಪಕ್ಷ ತನ್ನ ಮತಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದೆ (43 ಲಕ್ಷಕ್ಕೆ ಪ್ರತಿಯಾಗಿ ಈಗ 50 ಲಕ್ಷ) ಶೇ ಮತ ಪ್ರಮಾಣದಲ್ಲಿ ಹೆಚ್ಚಳ ಕಂಡು ಬಂದಿದೆ (ಶೇ 33 ಕ್ಕೆ ಪ್ರತಿಯಾಗಿ 38) ಇದು ದೇಶದ ಸಮಗ್ರತೆ ಬಗ್ಗೆ ಜನತಾ ಪಕ್ಷ ತಳೆದ ತಪ್ಪು ನಿಲುವು, ಭಾರತೀಯ ಜನತಾ ಪಕ್ಷದೊಡನೆ ಮಾಡಿಕೊಂಡ ಅಲ್ಪಸಂಖ್ಯಾತ ವಿರೋಧಿ ಒಪ್ಪಂದದ ನಡುವೆಯೂ ಜನತಾ ಸರ್ಕಾರದ ಸಾಧನೆ, ಎಡ ಪಕ್ಷಗಳು ನೀಡಿದ ಬೆಂಬಲ, ನಮ್ಮ ಪಕ್ಷ ರಾಜ್ಯಾದ್ಯಂತ ನಡೆಸಿದ ಪ್ರಚಾರದ ಪರಿಣಾಮ., ಭಾರತದ ಎಂಟನೇ ಲೋಕಸಭಾ ಚುನಾವಣೆಗಳಲ್ಲಿ ಭಾರತದ ಮತದಾರ ಮತ್ತೊಮ್ಮೆ ಕಾಂಗ್ರೆಸ್ (ಐ) ನ ಪೊಳ್ಳು ಘೋಷಣೆಗಳಿಗೆ ಮರುಳಾಗಿದ್ದಾನೆ ಎಂಬುದು ಸ್ಪಷ್ಟ ಅದೇ ರೀತಿ ನಮ್ಮ ಪಕ್ಷ ಭಾರತದ ಸಮಗ್ರತೆಯ ರಕ್ಷಣೆಯ ಬಗ್ಗೆ ತಳೆದ ಸರಿಯಾದ ನೀತಿಯ ಪರಿಣಾಮವಾಗಿ ತನ್ನ ಭದ್ರನೆಲೆಗಳಲ್ಲಿ ತನ್ನ ಮತ ಬೆಂಬಲವನ್ನು ಉಳಿಸಿಕೊಳ್ಳಲು, ಕಾಂಗ್ರೈನ ಅಪಪ್ರಚಾರದ ಧಾಳಿಗೆ ಸಮರ್ಥ ಪ್ರತಿರೋಧ ನೀಡಲು ಸಾಧ್ಯವಾಗಿದೆ ಎಂಬುದೂ ಕೂಡ ಸ್ಪಷ್ಟ.

ಕೇರಳ

ಸಿಪಿಐ [ಎಂ]ನ ಮೇಲೆ ಪೋಲಿಸ್ ಮತ್ತು ಕಾಂಗ್ರೈನಿಂದ ಹಿಂಸಾಚಾರ

ಕೇರಳ ರಾಜ್ಯದಾದ್ಯಂತ ಚುನಾವಣೆಯ ನಂತರ ಕಾಂಗ್ರೆಸ್ [ಐ) ಮತ್ತು ಪೋಲೀಸ್ ಒಟ್ಟುಗೂಡಿ ಸಿ. ಪಿ. ಐ. (ಎಂ) ಸದಸ್ಯರ, ಬೆಂಬಲಿಗರ ಮತ್ತು ಇನ್ನಿತರ ಎಡ, ಪ್ರಜಾಸತ್ತಾತ್ಮಕ ಸಂಘಟನೆಗಳ ಮೇಲೆ ವ್ಯಾಪಕವಾದ ಯೋಜಿತ ದಬ್ಬಾಳಿಕೆ, ಹಿಂಸಾಚಾರವನ್ನು ಆರಂಭಿಸಿದೆ. ಇದು 1971 ರಿಂದ 76 ರವರೆಗೆ ಪ. ಬಂಗಾಳದಲ್ಲಿ ನಡೆದ "ಅರೆ ಫ್ಯಾಸಿಸ್ಟ್ ದಬ್ಬಾಳಿಕೆ"ಯನ್ನು ನೆನಪಿಗೆ ತರುತ್ತದೆ.

ಅಲೆಪ್ಪಿಯ ಜಿಲ್ಲಾ ಸಮಿತಿ ಆಫೀಸಿನ ಮೇಲೆ ಪೋಲೀಸರು ಧಾಳಿ ಮಾಡಿ 3 ಮಂದಿ ಪಕ್ಷದ ಸದಸ್ಯರನ್ನು ಬಂಧಿಸಿದ್ದಾರೆ. ಕ್ರಿಸ್‌ಮಸ್ ಹಬ್ಬದ ರಾತ್ರಿ ಪೋಲೀಸರು ಮತ್ತು ಕಾಂಗ್ರೈ ಗೂಂಡಾಗಳು ಪಕ್ಷದ ಸದಸ್ಯರ, ಬೆಂಬಲಿಗರ ಮನೆಗಳ ಮೇಲೆ ತೀವ್ರ ರೀತಿಯ ಧಾಳಿ ನಡೆಸಿ ನಿದ್ರಿಸುತ್ತಿದ್ದವರ ಮೇಲೆ ಹಲ್ಲೆ ಮಾಡಿ ಬಂಧಿಸಿದ್ದಾರೆ. ಮನೆಯನ್ನು ಧ್ವಂಸ ಮಾಡಿದ್ದಾರೆ.

ತ್ರಿಚೂರಿನ ಚಾವಕ್ಕಾಡ್ ನಲ್ಲಿ ಓರ್ವ ಪಾರ್ಟಿ ಸದಸ್ಯರಿಗೆ ಕಾಂಗ್ರೈ ಗೂಂಡಾಗಳು ಚೂರಿಯಿಂದ ಇರಿದಿದ್ದು ಅವರ ಸ್ಥಿತಿ ಚಿಂತಾಜನಕವಾಗಿದೆ.

ಒಲಪ್ಪಾಡ್ ಎಂಬಲ್ಲಿ ಸಿ ಐ ಟಿ ಯು ಕಛೇರಿಗೆ ಕಾಂಗ್ರೈನವರು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ.

ಪಾಲಕ್ಕಾಡ್‌ನ ವಾನಿಯಂಗುಳಂನ ಸಿ ಐ ಟಿ ಯು ಕಛೇರಿಗೆ ಬೆಂಕಿ ಹಚ್ಚಲಾಗಿದೆ. ಅಲ್ಲಿ ಪೋಲೀಸರು ಅನೇಕ ಪಾರ್ಟಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ. ಮುಂಡೂರಿನಲ್ಲಿ ಕಾಂಗ್ರೈನವರು ಗುಂಪು ಕಟ್ಟಿಕೊಂಡು ಪಾರ್ಟಿ ಕಾರ್ಯಕರ್ತರನ್ನು ಥಳಿಸಿದ್ದಾರೆ. ಅಲ್ಲಿನ ಹೋಟೆಲ್ ಒಂದಕ್ಕೆ ನುಗ್ಗಿ ಎಲ್ಲವನ್ನು ಧ್ವಂಸ ಮಾಡಿದ್ದಾರೆ. ಇಡೀ ಪಾಲಕ್ಕಾಡ್ ಜಿಲ್ಲೆಯಲ್ಲಿ ನೂರಾರು ಪಕ್ಷದ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಹಿಂಸಿಸುತ್ತಿದ್ದಾರೆ.

ಪತ್ತನಂತಿಟ್ಟ ಜಿಲ್ಲೆಯಲ್ಲಿ ಕಾಂಗ್ರೈನವರು ಡಿ ವೈ ಎಫ್ ಐ ಸದಸ್ಯರ ಮೇಲೆ ಆಕ್ರಮಣ ನಡೆಸಿದ್ದು ಕಾ. ರಘುನಾಥ ಪಿಳ್ಳೈ ಎಂಬುವರು ಗಾಯಗೊಂಡು ಗಂಭೀರ ಸ್ಥಿತಿಯಲ್ಲಿದ್ದಾರೆ.

ಹರಿಪ್ಪಾಡ್ ಎಂಬಲ್ಲಿ ಚುನಾವಣೆಯ ನಂತರ ಕಾಂಗ್ರೈ ಗೂಂಡಾಗಳು ಹಾಗೂ ಪೋಲೀಸರು ಸೇರಿ ಪಕ್ಷದ ಹಲವಾರು ಕಾರ್ಯಕರ್ತರನ್ನು ಹಾಗೂ ಪ್ರಜಾ ಪ್ರಭುತ್ವ ಸಂಘಟನೆಗಳಿಗೆ ಸೇರಿದವರನ್ನು ಹೊಡೆದು ಬಂಧಿಸಲಾಗಿದೆ.

ಈ ಪ್ರದೇಶ 3 ದಿನಗಳಿಂದ ಸ್ಫೋಟಕ ಸ್ಥಿತಿಯಲ್ಲಿದೆ, ಈ ಪ್ರದೇಶದಲ್ಲಿ ಪೋಲೀಸರು ಕಾಂಗ್ರೈನವರೊಂದಿಗೆ ಸೇರಿಕೊಂಡು ಪಕ್ಷದ ಬೆಂಬಲಿಗರ ಮನೆಗಳನ್ನು ನುಗ್ಗಿ ಹೆಂಗಸರನ್ನು, ಮಕ್ಕಳನ್ನು ಹೊಡೆದಿದ್ದಾರೆ.

ಸಿ ಪಿ ಐ (ಎಂ) ನ ಕೇಂದ್ರ ಸಮಿತಿ ಸದಸ್ಯರಾದ ಕಾ. ಸುಶೀಲ ಗೋಪಾಲನ್ ಅವರು ಈ ಪ್ರದೇಶಗಳಲ್ಲಿ ಸುತ್ತಾಡಿ,ಆಸ್ಪತ್ರೆಗಳಿಗೆ ಭೇಟಿ ನೀಡಿ ಗಾಯಾಳುಗಳನ್ನು ಸಂತೈಸುತ್ತಿದ್ದಾರೆ.

ಕಲ್ಲಿಕೋಟೆಯಲ್ಲಿ "ಮಾತೃಭೂಮಿ" ರಾಷ್ಟ್ರೀಯ ದೈನಿಕದ ಕಛೇರಿಗೆ ನುಗ್ಗಿ ಪತ್ರಿಕೆಗಳಿಗೆ ಬೆಂಕಿಯಿಟ್ಟಿದ್ದಾರೆ.

ಈ ಹಿಂಸಾಚಾರಗಳು ಮತ್ತು ಮತದಾನ ಕೇಂದ್ರಗಳನ್ನು ವಶಪಡಿಸಿಕೊಳ್ಳುವ ಘಟನೆಗಳು ನಡೆದಿರುವುದು ಕಾಂಗ್ರೈ ಆಡಳಿತದ ರಾಜ್ಯಗಳಲ್ಲೇ ಹೆಚ್ಚು ಎಂಬುದು ಗಮನಿಸಬೇಕಾದ ಅಂಶ.

ಜನತೆಯ ಜೀವದೊಂದಿಗೆ ಚೆಲ್ಲಾಟವಾಡುವ ಬಹುರಾಷ್ಟ್ರೀಯ ಸಂಸ್ಥೆಗಳನ್ನು ದೇಶದಿಂದ ಹೊರಗಟ್ಟಿರಿ

ಭೂಪಾಲ್‌ನಲ್ಲಿರುವ ಅಮೇರಿಕನ್ ಬಹು ರಾಷ್ಟ್ರೀಯ ಸಂಸ್ಥೆಯ ಒಡೆತನದಲ್ಲಿರುವ ಯೂನಿಯನ್ ಕಾರ್ಬೈಡ್ ಕೀಟ ನಾಶಕ ಸ್ಥಾವರವು ಭಾರತದ ಜನತೆಗೆ ವಿರುದ್ಧವಾಗಿ ಘೋರ ಅಪರಾಧವನ್ನೆಸಗಿದೆ. ಇದರಲ್ಲಿ ಸಾವಿರಾರುಜನರು ಸಾಮೂಹಿಕವಾಗಿ ಕಗ್ಗೊಲೆಗೀಡಾಗಿದ್ದಾರೆ. ಅತ್ಯಾವಶ್ಯಕವಾದ ಸಂರಕ್ಷತಾ ಕ್ರಮುಗಳನ್ನು ಉಲ್ಲಂಘನೆ ಮಾಡಿದ ಈ ಬಹು ರಾಷ್ಟ್ರೀಯ ಸಂಸ್ಥೆ ಈ ಕಗ್ಗೊಲೆಗೆ ಕಾರಣವಾಗಿದೆ.

ಜಗತ್ತು ಹಿಂದೆಂದೂ ಕಂಡರಿಯದಿದ್ದಂತಹ ಭೀಕರ ಕೈಗಾರಿಕಾ ದುರಂತ ಆದ ಒಡನೆಯೇ ಕೀಟನಾಶಕ ಸ್ಥಾವರದ ಮಾಜಿ ಮ್ಯಾನೇಜರ್ ವಾರೆನ್‌ವೂಮೆರ್ ಹೇಳಿದ್ದು: "ಅಮೇರಿಕದಲ್ಲಿರುವ ಸ್ಥಾವರದಲ್ಲಿ ಅನುಸರಿಸಿದ ಸುರಕ್ಷತಾ ಮಟ್ಟವನ್ನೇ ಇಲ್ಲೂ (ಭೂಪಾಲ) ಅನುಸರಿಸಿದ್ದೆವು. ಉತ್ಪಾದನಾ ಪ್ರಕ್ರಿಯೆಯು ಒಂದೇ ಆಗಿತ್ತು. ರಸಾಯನಿಕಗಳೂ ಒಂದೇ ಆಗಿದ್ದವು. ಆದರೆ ಅಳತೆ ಪ್ರಮಾಣ ಮಾತ್ರ ಭಿನ್ನವಾಗಿತ್ತು. ವೆಸ್ಟ್ ವರ್ಜೀನಿಯಾದ ಸ್ಥಾವರ ದೊಡ್ಡದಾಗಿತ್ತು" ಎಂಬುದಾಗಿ ಅಮೇರಿಕಾದ ವೆಸ್ಟ್ ವರ್ಜೀನಿಯಾ ಎಂಬಲ್ಲಿ ಸ್ಥಾಪಿಸಲಾಗಿರುವ ಕೀಟ ನಾಶಕ ಸ್ಥಾವರದ ಕುರಿತು ತಿಳಿಸಿದರು.

ಉದ್ದೇಶಪೂರ್ವಕ ನಿರ್ಲಕ್ಷತೆ

ಒಂದು ವಾರಕ್ಕೆ ಮುಂಚಿತವಾಗಿಯೇ ಯೂನಿಯನ್ ಕಾರ್ಬೈಡ್ ಸತ್ಯವನ್ನು ಒಪ್ಪಿಕೊಂಡಿತು. ಸಂಸ್ಥೆಯ ಆರೋಗ್ಯ, ಸುರಕ್ಷತೆ ಪರಿಸರ ವ್ಯವಹಾರಗಳ ನಿರ್ದೇಶಕರಾದ ಜಾಕ್ಸನ್ ಚೌನಿಂಗ್ ಅವರು ಕಂಪ್ಯೂಟರ್ ನಿಯಂತ್ರಣದ ಮುನ್ನೆಚ್ಚರಿಕೆ ವ್ಯವಸ್ಥೆಯಿದ್ದು ಅದು ಅನಿಲದ ಒತ್ತಡದ ಪ್ರಮಾಣವನ್ನು ಕಂಡು ಹಿಡಿದು ಅನಿಲ ಸೋರಿಕೆಯನ್ನು ತಪ್ಪಿಸಬಲ್ಲುದಾಗಿತ್ತೆಂದು ತಿಳಿಸಿದರು. ವೆಸ್ಟ್ ವರ್ಜಿನಿಯಾದ ಘಟಕದಲ್ಲಿ ಇಂತಹ ವ್ಯವಸ್ಥೆಯಿದೆ. ಭೂಪಾಲದಲ್ಲಿ ಅಂತಹ ವ್ಯವಸ್ಥೆಯನ್ನು ರೂಪಿಸಬಾರದೆಂಬ ನಿರ್ಧಾರವನ್ನೂ ಕೈಗೊಳ್ಳಲಾಗಿತ್ತು ಏಕೆ? ಏಕೆಂದರೆ ಸಂಸ್ಥೆಯ ಪ್ರಕಾರ ಭಾರತದಲ್ಲಿ ಇದಕ್ಕೆ ಬೇಕಾದ ಬಿಡಿ ಭಾಗಗಳು ಮತ್ತು ಪೂರಕ ವ್ಯವಸ್ಥೆಯ ಕೊರತೆ ಇತ್ತೆಂದು ತಿಳಿಸಲಾಗಿದೆ. ಸಂಸ್ಥೆಯು ಈ ಬಿಡಿ ಭಾಗಗಳನ್ನು ಅಮೇರಿಕ ಸಂಯುಕ್ತ ಸಂಸ್ಥಾನದಿಂದ ತರಿಸಿಕೊಳ್ಳುವ ಆಲೋಚನೆಯನ್ನೇ ಮಾಡಲಿಲ್ಲವೇಕೆ? ಯಾಕೆಂದರೆ ಈ ಬಹು ರಾಷ್ಟ್ರೀಯ ಸಂಸ್ಥೆ ಇತರ ತೃತೀಯ ಜಗತ್ತಿನ ದೇಶಗಳಲ್ಲಿ ತಾನು ಕಾಣುವಂತೆಯೇ ಭಾರತದ ಜನರನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದೆ.

ಎಚ್ಚೆತ್ತುಕೊಳ್ಳದ ಸಂಸ್ಥೆ

ಭೂಪಾಲದ ಸ್ಥಾವರದಲ್ಲಿ ಸರಕ್ಷತಾ ಕ್ರಮುಗಳನ್ನು ಸಮರ್ಪವಾಗಿ ಕೈಗೊಂಡಿಲ್ಲವೆಂಬ ಅರಿವು ಈ ಸಂಸ್ಥೆಗೆ ಮೊದಲೇ ಇತ್ತು ಎಂಬ ಸಂಗತಿಯು ಅದರ ಅಪರಾಧದ ಪ್ರಮಾಣವನ್ನು ಇನ್ನೂ ಹೆಚ್ಚಿಸಿದೆ. ಅನಿಲವು ಸಣ್ಣ ಪ್ರಮಾಣದಲ್ಲಿ ಆಗಾಗ ಸೋರಿಕೆಯಾಗುತ್ತಿದ್ದರೂ ಕೂಡ 1981 ಡಿಸೆಂಬರ್ 26 ರಂದು ಸ್ಥಾವರದ ಒಬ್ಬ ಕಾರ್ಮಿಕ ಅನಿಲ ಸೋರಿಕೆಯಿಂದ ಸಾವಿಗೀಡಾದ ನಂತರವೇ 1982 ರ ಮೇ ತಿಂಗಳಲ್ಲಿ ಸಂಸ್ಥೆಯು ಯು. ಎಸ್. ಐ. ನಿಂದ ಮೂರು ಮಂದಿ ತಜ್ಞರ ತಂಡವನ್ನು ಕಳುಹಿಸಿ ರಕ್ಷಣಾ ವಿಧಾನಗಳ ಕುರಿತು ಪರಿಶೀಲಿಸುವಂತೆ ಕೋರಿತು. ಈ ತಜ್ಞರ ವರದಿಯು ಸ್ಥಾವರದ ಸುರಕ್ಷಾ ವ್ಯವಸ್ಥೆಯಲ್ಲಿದ್ದ ಸುಮಾರು ಹತ್ತು ವಿನಾಶಕಾರೀ ಲೋಪ ದೋಷಗಳನ್ನು ಎತ್ತಿ ತೋರಿಸಿತು. ಆದರೆ ಈ ಬಹುರಾಷ್ಟ್ರೀಯ ಸಂಸ್ಥೆ ಈ ದೋಷಗಳನ್ನು ಸರಿಪಡಿಸಿ ಸುರಕ್ಷಾ ನಿಯಮುಗಳನ್ನು ಖಾತರಿ ಪಡಿಸದೆ ನಿರ್ಲಕ್ಷ್ಯತೆ ತೋರಿಸಿತು.

ಇದರ ಪರಿಣಾಮವಾಗಿ ಫೆಬ್ರವರಿ 1982 ರಂದು ಫಾಸ್‌ಜೀನ್ ಅನಿಲದ ಸೋರಿಕೆಯಿಂದಾಗಿ 24 ಮಂದಿ ತೀವ್ರವಾಗಿ ಹಾನಿಗೊಳಗಾದರು ಅಕ್ಟೋಬರ 1982 ರಂದು ನಡೆದ ಸೋರಿಕೆಯಿಂದಾಗಿ ಸುತ್ತ ಮುತ್ತಲ ಪ್ರದೇಶಗಳ ಜನರು ಭಯಭೀತರಾದರು. ಅದಾದ ನಂತರ ಮತ್ತೆ ಎರಡು ಸಲ ಸೋರಿಕೆ ಸಂಭವಿಸಿತು ಮತ್ತು ಅಂತಿಮವಾಗಿ ಡಿಸೆಂಬರ್ 3 ರಂದು ನಡೆದ ಅನಿಲ ಸೋರಿಕೆಯಲ್ಲಿ ಸಾವಿರಾರು ಮಂದಿ ಕೊಲ್ಲಲ್ಪಟ್ಟರು.

ಅನಿಲ ಸೋರಿಕೆಯ ನಂತರ ಕೂಡ ಮುಖ್ಯ ವೈದ್ಯಾಧಿಕಾರಿ ಮತ್ತು ಸೀನಿಯರ್ ಎಕ್ಸಿಕ್ಯೂಟಿವ್ ಅವರುಗಳು ಅನಿಲವು ಕೇವಲ ಕೆರಳಿಕೆಯುಂಟು ಮಾಡುವಂತವುದೆಂದೂ, ಪ್ರಾಣಾಂತಿಕವಲ್ಲವೆಂದೂ ಹೇಳಿಆಸ್ಪತ್ರೆಯ ಡಾಕ್ಟರುಗಳನ್ನು ದಿಕ್ಕು ತಪ್ಪಿಸಿದ್ದಾರೆ.

ಶಿಕ್ಷೆಗೆ ಗುರಿಪಡಿಸಿ

ಈ ಬಹು ರಾಷ್ಟ್ರೀಯ ಸಂಸ್ಥೆಯ ಅಪರಾಧ ಸಾಮಾನ್ಯವಾದುದಲ್ಲ, ಸಾಧ್ಯವಾಗುವ ಅತಿ ಹೆಚ್ಚಿನ ಶಿಕ್ಷಗೆ ಇವರನ್ನು ಗುರಿಪಡಿಸಬೇಕು.

ಮಧ್ಯ ಪ್ರದೇಶದ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಬೇಜವಾಬ್ದಾರಿಯಾಗಿ ವರ್ತಿಸಿ ತೀವ್ರತರ ಅಪರಾಧವನ್ನೆಸಗಿವೆ. ಭೂಪಾಲ್ ಸ್ಥಾವರಕ್ಕೆ ಆಗತ್ಯವಾದ ರಾಸಾಯನಿಕಗಳನ್ನು ಅಮೇರಿಕದಿಂದ ಆಮದು ಮಾಡಿಕೊಳ್ಳುತ್ತಿದ್ದ ಕಂಪೆನಿಯು ನಂತರ ಭೂಪಾಲ್‌ನಲ್ಲೇ ಆ ರಾಸಾಯನಿಕಗಳನ್ನು ತಯಾರಿಸಲು ನಿರ್ಧರಿಸಿದಾಗ ಅದಕ್ಕೆ 1975 ರಲ್ಲಿ ಲೈಸೆನ್ಸ್ ನೀಡಿದ ಕೇಂದ್ರ ಸರ್ಕಾರ, ನಂತರ ಏನಾಗಿದೆಯೆಂಬುದರ ಕಡೆಗೆ ಗಮನವನ್ನೇ ನೀಡಲಿಲ್ಲ. ಈ ದೇಶದ ಜನತೆಯ ರಕ್ಷಣೆಯ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಆದರೆ ಈ ಸ್ಥಾವರದಲ್ಲಿ ಎಂಥ ರೀತಿಯ ರಾಸಾಯನಿಕಗಳನ್ನು ಹಾಗೂ ಅನಿಲಗಳನ್ನು ತಯಾರಿಸಲಾಗುತ್ತಿದೆ, ಮತ್ತು ಎಲ್ಲಾ ರೀತಿಯ ಸುರಕ್ಷಾ ಕ್ರಮುಗಳನ್ನು ಕೈಗೊಳ್ಳಲಾಗಿದೆಯೇ ಎಂಬುದನ್ನು ನೋಡಲಿಲ್ಲ. ಇಂತಹ ನಿರ್ಲಕ್ಷ್ಯತೆ ತುಂಬಾ ಅಪಾಯಕಾರಿ. ಏಕೆಂದರೆ ದುರಂತಗಳು ಸಂಭವಿಸುವ ಕಾರಣವೊಂದಕ್ಕಾಗಿ ಅಲ್ಲ, ಅಲ್ಲಿ ಉತ್ಪಾದಿಸುವ ವಿಷಾನಿಲಗಳನ್ನು ಇನ್ನಿತರ ವಿನಾಶಕಾರೀ ಉದ್ದೇಶಗಳಿಗಾಗಿ ಬಳಸಲ್ಪಡಬಹುದು ಎಂಬುದಕ್ಕಾಗಿ.

ಕೃತಿಗಿಳಿಯದ ಸೂಚನೆಗಳು

ಕಲುಷಿತಗೊಳಿಸುವ ಉದ್ಯಮಗಳನ್ನು ತಡೆಹಿಡಿಯುವ ಸಲುವಾಗಿ ನಾಲ್ಕು ವರ್ಷಗಳ ಹಿಂದೆ ಕೇಂದ್ರ ಸರಕಾರ ಒಂದು ಮಾರ್ಗ ಸೂಚಿಯನ್ನು ಪ್ರಕಟಿಸಿತು. ಇದರ ಪ್ರಕಾರ ಐದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಹೊಸ ಉದ್ಯಮಗಳ ಸ್ಥಾಪನೆಯನ್ನು ತಡೆಯುವ ಮತ್ತು ಈಗಾಗಲೇ ಸ್ಥಾಪಿತವಾಗಿರುವ ಉದ್ಯಮಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ನೆರವು ನೀಡುವ ಅಂಶಗಳು ಅದರಲ್ಲಿ ಅಡಕವಾಗಿದ್ದವು. ನಿಷೇಧಿತ ಸ್ಥಳಗಳಲ್ಲಿರುವ ಉದ್ಯಮಗಳ ವಿಸ್ತರಣೆಯನ್ನು ಸಹ ಇದು ಪ್ರತಿಬಂಧಿಸಿತು. ನಂತರ ಕೀಟನಾಶಕ ಉದ್ಯಮವನ್ನೊಳಗೊಂಡಂತೆ, 18 ಉದ್ಯಮಗಳನ್ನು ಕಲುಷಿತ ಉದ್ಯಮಗಳೆಂದು ಗುರುತಿಸಲಾಯಿತು. ಇಷ್ಟೆಲ್ಲಾ ಆದರೂ ಸಹ ಅಪಾಯಕಾರಿಯಾದ ಯೂನಿಯನ್ ಕಾರ್ಬೈಡ್ ಅನ್ನು ಜನದಟ್ಟಣೆಯ ಪ್ರದೇಶದಿಂದ ನಿವಾರಿಸಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

ನಗರ ಸಭೆಯ ಭ್ರಷ್ಟಾಚಾರ

1969 ರಲ್ಲಿ ಈ ಸ್ಥಾವರವನ್ನು ಸ್ಥಾಪಿಸಿದಾಗ ಅದು ಭೂಪಾಲ್ ನಗರ ಸಭೆಯ ವ್ಯಾಪ್ತಿಯಿಂದ ಹೊರಗಿತ್ತು. ನಂತರ 1975 ರಲ್ಲಿ ಅದರ ಸುತ್ತಾ ಜನವಸತಿಯ ಕಾಲೋನಿಗಳು ಬೆಳೆದಾಗ ಆಗಿನ ಕಾರ್ಪೊರೇಶನ್‌ನ ಆಡಳಿತಗಾರರಾಗಿದ್ದ ಎಂ. ಎನ್. ಬುಚ, ಒಂದು ನೋಟೀಸ್ ಅನ್ನು ಯೂನಿಯನ್ ಕಾರ್ಬೈಡ್‌ಗೆ ಕಳುಹಿಸಿ ಉದ್ಯಮವನ್ನು ಅಲ್ಲಿಂದ ತೆರವು ಮಾಡಬೇಕೆಂದು ಆಜ್ಞಾಪಿಸಿದರು. ಆಗ ಸಂಸ್ಥೆಯು ಒಂದು ಉದ್ಯಾನವನ ನಿರ್ಮಾಣಕ್ಕಾಗಿ 25 ಸಾವಿರ ರೂಪಾಯಿಗಳನ್ನು ನಗರ ಸಭೆಗೆ ದಾನ ಮಾಡಿತು. ನೋಟೀಸು ಫೈಲುಗಳಲ್ಲೇ ಉಳಿಯಿತು. ಸ್ಥಾವರ ಅಲ್ಲೇ ಉಳಿಯಿತು. ಮತ್ತು ಬುಚರವರನ್ನು ಅಲ್ಲಿಂದ ಹೊರ ನಡೆಸಲಾಯಿತು.

ರಾಜ್ಯ ಸರ್ಕಾರದ ಬೇಜವಾಬ್ದಾರಿ ಅಲ್ಲಿಗೇ ಕೊನೆಯಾಗಲಿಲ್ಲ. 1981 ರಲ್ಲಿ ಸ್ಥಾವರದ ಕಾರ್ಮಿಕನೊಬ್ಬ ಸತ್ತಾಗ ರಾಜ್ಯ ಸರ್ಕಾರ ಏಕ ಸದಸ್ಯ ಆಯೋಗವೊಂದನ್ನು ರಚಿಸಿ ಪರಿಶೀಲನೆಗೆ ಕಳಿಸಿತು. ಅವರ ವರದಿಯು ಸುರಕ್ಷಾ ಕ್ರಮುಗಳಲ್ಲಿನ ನಿರ್ಲಕ್ಷತೆಯೇ ಸಾವಿಗೆ ಕಾರಣವೆಂದು ತಿಳಿಸಿತು. ಆಗಲೂ ಕೂಡ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

ಒಂದು ವರ್ಷದ ನಂತರ ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾದಾಗ ಈ ವಿಶಯವನ್ನು 21-13-82 ರಂದು ವಿಧಾನ ಸಭೆಯಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಯಿತು. ಆಗ ಕಾರ್ಮಿಕ ಮಂತ್ರಿಯವರು ಮಾತನಾಡುತ್ತಾ ಕಾರ್ಖಾನೆಯಲ್ಲಿ ಯಾವ ರೀತಿಯ ಅಪಘಾತಗಳೂ ಸಂಭವಿಸಲಾರವೆಂದೂ, ಅಲ್ಲಿ ಉಪಯೋಗಿಸಲಾಗುವ ವಿಷಾನಿಲಗಳಿಂದ ಯಾವುದೇ ಅಪಾಯವೂ ಇಲ್ಲವೆಂದೂ ತಿಳಿಸಿ ರಕ್ಷಣಾ ವ್ಯವಸ್ಥೆ ಅಚ್ಚುಕಟ್ಟಾಗಿರುವುದಾಗಿತಿಳಿಸಿದರು. ಕಾರ್ಖಾನೆಗೆ 25 ಕೋಟಿ ರೂಪಾಯಿಗಳ ಬಂಡವಾಳ ಹೂಡಲಾಗಿದೆಯೆಂದೂ ಅದನ್ನು ಸ್ಥಳಾಂತರಿಸುವುದು ಸಣ್ಣ ವಿಚಾರವಲ್ಲವೆಂದೂ ವಾದಿಸಲಾಯಿತು. ಆದರೆ ಈಗ ಸಾವಿರಾರು ಮಾನವ ಜೀವಗಳನ್ನು ಬಹಳ ಸುಲಭವಾಗಿ ಕೊಲೆ ಮಾಡಲು ಸಾಧ್ಯವಾಗಿದೆ.

ರಾಜ್ಯ ಸರ್ಕಾರದ ಅಪರಾಧ ಗಂಭೀರವಾದುದಾಗಿದೆ. ಅದನ್ನು ಕಟಕಟೆಯಲ್ಲಿ ನಿಲ್ಲಿಸಲೇ ಬೇಕಾಗಿದೆ.

ಅಮೇರಿಕದಪ್ರಯೋಗಶಾಲೆ

ಎಲ್ಲರಿಗೂ ಗೊತ್ತಿರುವಂತೆ ಅಮೇರಿಕ ಸಂಯುಕ್ತ ಸಂಸ್ಥಾನದ ಆಡಳಿತವು ರಸಾಯನಿಕ ಅಸ್ತ್ರಗಳನ್ನು ನಿಷೇಧಿಸುವ ಕುರಿತಾದ ಮಾತುಕತೆಗಳನ್ನು ನಿರಾಕರಿಸುತ್ತಿದೆ. ವಿಷಾನಿಲಗಳನ್ನು ಒಳಗೊಂಡಂತೆ ಇಂತಹ ರಸಾಯನಿಕ ಅಸ್ತ್ರಗಳನ್ನು ಅಭಿವೃದ್ಧಿ ಪಡಿಸಲು ಕೋಟ್ಯಾಂತರ ಡಾಲರ್‌ಗಳನ್ನು ಅಲ್ಲಿನ ಸರ್ಕಾರ ಖರ್ಚು ಮಾಡುತ್ತಿದೆ. ಇಂತಹ ಅಸ್ತ್ರಗಳಿಂದ ಇವರು ವಿಯೆತ್ನಾಮಿನಲ್ಲಿ ಏನು ಮಾಡಿದರೆನ್ನುವುದು ಇತ್ತೀಚಿನ ಇತಿಹಾಸವಾಗಿದೆ. ಭೂಪಾಲ್ ದುರಂತದ ಪರಿಣಾಮವನ್ನು ಅಳೆಯಲು ಯಾವುದೇ ಖರ್ಚಿಲ್ಲದೆ ಭಾರತದ ಜನರನ್ನು ಅದು ಬಳಸಿಕೊಂಡಿದೆ.

ಬಹುರಾಷ್ಟ್ರೀಯರು ಎಸಗುತ್ತಿರುವ ಅಪರಾಧ ಇದೊಂದೇ ಅಲ್ಲ. ತಮ್ಮ ದೇಶದಲ್ಲಿ ನಿಷೇಧಿಸಲ್ಪಟ್ಟಿರುವ ಅಪಾಯಕರ ಔಷಧಗಳನ್ನು ನಮ್ಮ ದೇಶದಲ್ಲಿ ಮಾರುತ್ತಿದ್ದಾರೆ. ಇದರಿಂದ ಇಲ್ಲಿ ಅನೇಕ ಶಿಸುಗಳು ಅಪೂರ್ಣವಾಗಿ ಜನಿಸುತ್ತಿವೆ, ಇನ್ನಿತರ ಅನೇಕ ರೀತಿಯ ದೈಹಿಕ ನ್ಯೂನತೆಗಳನ್ನು ಉಂಟು ಮಾಡುತ್ತಿವೆ. ಇದು ಭಾರತವೊಂದಕ್ಕೇ ಸೀಮಿತವಾಗದೆ ಇಡೀ ತೃತೀಯ ಜಗತ್ತಿಗೇ ಆವರಿಸಿರುವ ಪಿಡುಗಾಗಿದೆ. ಈ ದೇಶಗಳನ್ನು ತನ್ನ ಆರ್ಥಿಕ ಶೋಷಣೆಗಷ್ಟೇ ಬಳಸಿಕೊಳ್ಳದೆ ತಮ್ಮ ಕ್ರಿಮಿನಲ್ ಉದ್ದೇಶಗಳ ಪ್ರಯೋಗ ರಂಗವನ್ನಾಗಿ ಉಪಯೋಗಿಸಿ ಕೊಳ್ಳುತ್ತಿದೆ.

ಜನತೆಯ ರಕ್ಷಣೆಮತ್ತು ಭವಿಷ್ಯವನ್ನು ಕಾಯ್ದುಕೊಳ್ಳಲು ಉಳಿದಿರುವ ಒಂದೇ ಮಾರ್ಗವೆಂದರೆ ಈ ಬಹುರಾಷ್ಟ್ರೀಯ ಸಂಸ್ಥೆಗಳನ್ನು ದೇಶದಿಂದ ಹೊರಗಟ್ಟಬೇಕಾಗಿದೆ.

[ಡಿಸೆಂಬರ್ 16 ರ "ಪೀಪಲ್ಸ್ ಡೆಮೊಕ್ರಸಿ" ಯ ಸಂಪಾದಕೀಯದ ಅನುವಾದ]

ಸಿ.ಐ.ಟಿ.ಯು. ಕಛೇರಿ ಉದ್ಘಾಟನೆ

ತಾ. 7-12-84 ರಂದು ಸಾಯಂಕಾಲ 6-30 ಗಂಟೆಗೆ ಹುಬ್ಬಳ್ಳಿಯಲ್ಲಿ ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾ. ಎಸ್ ಸೂರ್ಯನಾರಾಯಣ ರಾವ್ ಅವರು ಸಿ.ಐ.ಟಿ.ಯು. ಕಛೇರಿಯನ್ನು ಉದ್ಘಾಟಿಸಿದರು.

ಈ ಸಮಾರಂಭಕ್ಕೆ ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಅಧ್ಯಕ್ಷರಾದ ಕಾ. ವಿ. ಜೆ.ಕೆ. ನಾಯರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ವಿ. ಎನ್. ಹಳಕಟ್ಟಿಯವರು ಉಪಸ್ಥಿತರಿದ್ದರು. ಈದಗಾ ಮೈದಾನದಿಂದ ಮೆರವಣಿಗೆ ಮೂಲಕ ಆಗಮಿಸಿದ ಕಾರ್ಮಿಕ ಸಮೂಹವನ್ನು ಉದ್ದೇಶಿಸಿ ಮಾತನಾಡಿದ ಕಾ. ಸೂರಿಯವರು ಶಕ್ತಿಯುತ ವಿಶಾಲ ಸಂಘಟನೆಯನ್ನು ಕಟ್ಟಿಕೊಂಡು ಜಾತ್ಯಾತೀತ, ಶೋಷಣೆ ರಹಿತ ಹೊಸ ಸಮಾಜವನ್ನು ರೂಪಿಸುವುದರಲ್ಲಿ ಪ್ರಯತ್ನಿಸಬೇಕೆಂದು ಕರೆ ಇತ್ತರು.

ಸಿ. ಐ. ಟಿ. ಯು. ಧಾರವಾಡ ಘಟಕದ ಸಂಚಾಲಕರಾದ ಕಾ. ವಿ.ಎಂ. ಪೂಜಾರ್ ಸ್ವಾಗತಿಸಿದರು.

ಆರ್ಥಿಕ ಸಮೀಕ್ಷೆ :

– ಆರ್. ಚಂದ್ರ

ಹಣಕಾಸು ನೀತಿ ಮತ್ತು ಆದಾಯದಲ್ಲಿ ಅಸಮಾನತೆಗಳು

ದೇಶದಲ್ಲಿ ಆರ್ಥಿಕ ದುಃಸ್ಥಿತಿಯು ಉಲ್ಬಣ ಗೊಳ್ಳುವಂತಹ ಇಂದಿರಾ ಕಾಂಗ್ರೆಸ್‌ನ ಕೇಂದ್ರ ಸರ್ಕಾರದ ಧೋರಣೆಗಳನ್ನು ವಿಶ್ಲೇಷಿಸಿ ಕಾ. ಕಾರ್ತಿಕ್ ರ್‍ಯಾ ಅವರು "ಪೀಪಲ್ಸ್ ಡೆಮಾಕ್ರಸಿ" ಯಲ್ಲಿ (25-11-84 ಮತ್ತು 2-12-84) ಬರೆದ ಲೇಖನಗಳ ಆಧಾರದಲ್ಲಿ, ಈ ಮೊದಲು "ನಾವು ಮೂವತ್ತು ವರ್ಷಗಳಲ್ಲಿ ಸಾಧಿಸಿದ್ದೇನು" ಎಂಬ ಕುರಿತಾದ ವಿಶ್ಲೇಷಣೆಯನ್ನು ಈ ಹಿಂದಿನ ಸಂಚಿಕೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಈ ಸಂಚಿಕೆಯಲ್ಲಿ ಲೇಖನದ ಮುಂದಿನ ಭಾಗವನ್ನು ಸಂಗ್ರಹಿಸಿ ಕೊಡಲಾಗಿದೆ.

ಆದಾಯದಲ್ಲಿ ಅಸಮಾನತೆ

ಭಾರತದಲ್ಲಿ ವಾರ್ಷಿಕ ವೈಯಕ್ತಿಕ ಸರಾಸರಿ ಆದಾಯದಲ್ಲಿ ಅಲ್ಪ ಸ್ವಲ್ಪ ಹೆಚ್ಚಾಗಿದ್ದರೂ, ಒಟ್ಟು ಜನ ಸಂಖ್ಯೆಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಜನರ ಶೇಕಡಾಂಶದಲ್ಲಿ ಇನ್ನೂ ಇಳಿಮುಖವಾಗದಿರಲು ಆದಾಯದಲ್ಲಿ ಅಸಮಾನತೆ ಹೆಚ್ಚುತ್ತಿರುವುದೇ ಮುಖ್ಯ ಕಾರಣ. ಕಳೆದ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ರಾಷ್ಟ್ರೀಯ ಉಳಿತಾಯ ದರವು ಹೆಚ್ಚಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆ ಎಂದು ಹೇಳಿಕೊಳ್ಳಲಾಗಿದೆ. ಆದರೆ, ಯಾವ ವರ್ಗದ ಜನರ ಆದಾಯ ಮತ್ತು ಉಳಿತಾಯ ಶಕ್ತಿ ಹೆಚ್ಚಾಗಿದೆ? ಪ್ರತ್ಯಕ್ಷ ಅನುಭವ ಹಾಗೂ ಅಧಿಕೃತ ಅಂಕೆ ಸಂಖ್ಯೆಗಳ ಆಧಾರದಲ್ಲಿ, ಇದುವರೆಗೆ ರಾಷ್ಟ್ರೀಯ ಆದಾಯದ ವಿತರಣೆಯಲ್ಲಿಯೇ ಅಪಾರ ಅಸಮಾನತೆಗಳಿರುವುದನ್ನು ಗಮನಿಸಬಹುದು. ದುಡಿಯುವ ಬಡ ಜನರು ತಮ್ಮ ಜೀವನಾವಶ್ಯಕತೆಗಳಿಂದಲೇ ವಂಚಿತರಾಗಿದ್ದಾರೆ. ಅವರ ಅಲ್ಪ ಆದಾಯವೆಲ್ಲಾ ದಿನ ಬಳಕೆಯ ಅಗತ್ಯತೆಗಳಿಗೇ ವ್ಯಯವಾಗುತ್ತಿದ್ದು, ಉಳಿತಾಯಕ್ಕೆ ಏನೂ ಸಿಗುವುದಿಲ್ಲ 1975—76 ರಷ್ಟು ಹಿಂದಿನ ಅಂಕೆ ಸಂಖ್ಯೆಗಳನ್ನೇ ಪರಿಶೀಲಿಸಿದರೂ (ಕೋಷ್ಟಕ 7) ಈ ವಿಷಯ ಸ್ಪಷ್ಟವಾಗುವುದು.

1975—76 ರಲ್ಲಿ ದೇಶದ ಶೇ. 20 ರಷ್ಟು ಮೇಲ್ಮಟ್ಟದ ಕುಟುಂಬಗಳ ಆದಾಯವು ಒಟ್ಟು ಆದಾಯದ ಅರ್ಧಾಂಶದಷ್ಟು, ಶೇ 10 ರಷ್ಟು ಮೇಲ್ಮಟ್ಟದ ಕುಟುಂಬಗಳ ಆದಾಯವು ಒಟ್ಟು ಆದಾಯದ ಮೂರನೇ ಒಂದರಷ್ಟು ಆಗಿತ್ತು. ಜೊತೆಗೇ, ಶೇ 20 ರಷ್ಟು ಕೆಳಮಟ್ಟದ ಕುಟುಂಬಗಳ ಆದಾಯವು ಒಟ್ಟು ಆದಾಯದ ಶೇ 7ರಷ್ಟು, ಶೇ 40 ರಷ್ಟು ಕೆಳಮಟ್ಟದ ಕುಟುಂಬಗಳ ಆದಾಯವು ಶೇ 16.2 ರಷ್ಟು, ಶೇ 60 ರಷ್ಟುಕೆಳಮಟ್ಟದ ಕುಟುಂಬಗಳ ಆದಾಯವು ಒಟ್ಟು ಆದಾಯದ ಶೇ 30.1 ರಷ್ಟು ಆಗಿತ್ತು. ಅರ್ಥಾತ್, ಕೆಳಮಟ್ಟದ ಶೇ 60ರಷ್ಟು ಕುಟುಂಬಗಳಲ್ಲಿರುವಷ್ಟು ಆದಾಯವು ಮೇಲ್ಮಟ್ಟದ ಶೇ 10 ರಷ್ಟು ಕುಟುಂಬಗಳಲ್ಲಿಯೇ ಕೇಂದ್ರೀಕೃತವಾಗಿದೆ! ಉಳಿತಾಯವಾಗುತ್ತಿರುವುದು ಈ ಮೇಲ್ಮಟ್ಟದ ಕುಟುಂಬಗಳಲ್ಲಿ, ನಿರ್ಗತಿಕರಾಗುತ್ತಿರುವುದು ಮತ್ತು ಬಡತನ ರೇಖೆಗಿಂತ ಕೆಳಗಿಳಿಯುತ್ತಿರುವುದು ಕೆಳಮಟ್ಟದ ಶೇ 60 ರಷ್ಟು ಕುಟುಂಬಗಳು. ಇಷ್ಟರಿಂದಲೇ ಆದಾಯದ ವಿತರಣೆಯಲ್ಲಿನ ಅಸಮಾನತೆಯ ಸಂಪೂರ್ಣ ಚಿತ್ರಣ ಸಿಕ್ಕಿದಂತಾಗಲಿಲ್ಲ.

ಆದಾಯ ವಿತರಣೆಯ ಅಧಿಕೃತ ಅಂಕೆ ಸಂಖ್ಯೆಗಳು ಕೌಟುಂಬಿಕ ಆದಾಯಕ್ಕೆ ಮಾತ್ರ ಸೀಮಿತವಾಗಿವೆ. ವ್ಯವಸಾಯ, ವ್ಯಾಪಾರ, ಕೈಗಾರಿಕಾ ಮತ್ತಿತರ ಸಂಸ್ಥೆಗಳ ಆದಾಯ ಇದರಲ್ಲಿ ಸೇರಲಿಲ್ಲ. ಹಾಗೆಯೇ "ಕಪ್ಪು ಹಣ"ದ ಆದಾಯವು ಇದರಲ್ಲಿ ಸೇರಲಿಲ್ಲ. ಕೌಟುಂಬಿಕ ಆದಾಯಗಳ ಮೇಲೆ ಅಪ್ರತ್ಯಕ್ಷ ತೆರಿಗೆಯ ದುಷ್ಪರಿಣಾಮವನ್ನು ಇದರಲ್ಲಿ ಗಣನೆಗೆ ತೆಗೆದುಕೊಳ್ಳಲಿಲ್ಲ. ವ್ಯವಸಾಯ, ವ್ಯಾಪಾರ, ಕೈಗಾರಿಕಾ ಮತ್ತಿತರ ಸಂಸ್ಥೆಗಳ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಆದಾಯದ ಸ್ವಾಮ್ಯವು ಭೂಮಾಲಕ—ಬಂಡವಾಳಶಾಹಿ ವರ್ಗದ ಹಸ್ತಗಳಲ್ಲಿರುವುದನ್ನು ಗಮನಿಸಬೇಕು. ಈ ವರ್ಗದೊಡನೆಯೇ ಸದ್ಯದ ರೂ 7 0000ಕೋಟಿ ಕಪ್ಪು ಹಣದ ಸಿಂಹಪಾಲು ಇರುವುದನ್ನು ಗಮನಿಸಬೇಕು. ಅಪ್ರತ್ಯಕ್ಷ ತೆರಿಗೆಯ ಭಾರವು ಅಲ್ಪ ಆದಾಯವನ್ನು ಸಂಪೂರ್ಣವಾಗಿ ದಿನಬಳಕೆಯ ಅಗತ್ಯತೆಗಳ ಖರೀದಿಗಾಗಿ ಖರ್ಚು ಮಾಡುವ ಬಡ ಕುಟುಂಬಗಳ ಮೇಲೆಯೇ ಹೆಚ್ಚಾಗಿ ಬೀಳುವುದನ್ನೂ ಗಮನಿಸಬೇಕು. ಇಷ್ಟೆಲ್ಲಾ ನ್ಯೂನತೆಗಳಿದ್ದರೂ ಕೋಷ್ಟಕ 7 ರಲ್ಲಿನ ಅಂಕೆ ಸಂಖ್ಯೆಗಳು ಆದಾಯದ ಹಂಚುವಿಕೆಯ ಅಸಮಾನತೆಗಳ ಸ್ಥೂಲ ಪರಿಚಯ ನೀಡುವುವು.

ಅಪ್ರತ್ಯಕ್ಷ ತೆರಿಗೆ :

ಅಪ್ರತ್ಯಕ್ಷ ತೆರಿಗೆಯ ಭಾರವನ್ನೂ ಗಣನೆಗೆ ತೆಗೆದು ಕೊಂಡರೆ ಆದಾಯದ ವಿತರಣೆಯ ಅಸಮಾನತೆ ಮೊದಲ ನೋಟಕ್ಕಿಂತಲೂ ಗಂಭೀರವಾಗಿರುವುದು (ಕೋಷ್ಟಕ 8]. 1953-55 ರಿಂದ 1983-84 ರವರೆಗೆ ಒಟ್ಟು ತೆರಿಗೆ ಆದಾಯದಲ್ಲಿ ಅಪ್ರತ್ಯಕ್ಷ ತೆರಿಗೆಯ ಪಾಲು ಶೇ 58.8 ರಿಂದ ಶೇ 85.0 ರಷ್ಟು ಏರಿರುವುದನ್ನು ಗಮನಿಸಬೇಕು. ರಾಷ್ಟ್ರೀಯ ಆದಾಯ ಹೆಚ್ಚುತ್ತಿದ್ದರೂ, ತೆರಿಗೆಯ ಭಾರ ಮುಖ್ಯವಾಗಿ ಅಪ್ರತ್ಯಕ್ಷ ತೆರಿಗೆಯ ಭಾರವು 1953-55 ರಿಂದ 1982-83 ರ ವರೆಗೆ ಶೇ 3.7 ರಿಂದ ಶೇ 17.1 ರಷ್ಟು ಹೆಚ್ಚಾಗಿ, ಬಡ ಕುಟುಂಬಗಳ ಮೇಲೆಯೇ ಬಿದ್ದು ಅವುಗಳ ನಿವ್ವಳ ಆದಾಯ ಇನ್ನಷ್ಟು ಕ್ಷಯಿಸುತ್ತಾ ಬಂದಿತು. ಸರಕಾರದ ಹಣಕಾಸು ನೀತಿಯಿಂದ, ತೆರಿಗೆಯ ನೀತಿಯಿಂದ ಉದ್ದೇಶಪೂರ್ವಕವಾಗಿ ಆದಾಯವಿತರಣೆಯಲ್ಲಿ ಇನ್ನಷ್ಟು ಅಸಮಾನತೆಯನ್ನುಂಟುಮಾಡಲಾಗಿದೆ.

ಆಡಳಿತ ನಿರ್ದೇಶನದಿಂದ ಬೆಲೆ ಏರಿಕೆ

ಆದಾಯ ವಿತರಣೆಯ ಅಸಮಾನತೆಯ ಚಿತ್ರಣ ಇಲ್ಲಿಗೂ ಸಂಪೂರ್ಣವಾಗಲಿಲ್ಲ. ಅಪ್ರತ್ಯಕ್ಷ ತೆರಿಗೆಯೊಂದಿಗೇ ಇತ್ತೀಚಿಗಿನ ವರ್ಷಗಳಲ್ಲಿ ಕಾಂಗ್ರೆಸ್ ಕೇಂದ್ರ ಸರಕಾರವು ತನ್ನ ಆಡಳಿತ ನಿರ್ದೇಶನಗಳ ಮೂಲಕ ಉಕ್ಕು, ಕಲ್ಲಿದ್ದಲು, ತೈಲ, ಸಿಮೆಂಟ್, ಸಕ್ಕರೆ, ರೈಲ್ವೆ, ಅಂಚೆ-ತಂತಿ, ಇತ್ಯಾದಿ ಅತ್ಯವಶ್ಯಕ ವಸ್ತುಗಳ ಹಾಗೂ ಸೇವಾ ಸೌಲಭ್ಯಗಳ ಬೆಲೆಗಳನ್ನು ಆಗಾಗ ಹೆಚ್ಚಿಸುತ್ತಿದೆ. ಸರಕಾರದ ಅಧಿಕೃತ ಲೆಕ್ಕಕ್ಕೆ ಈ ಮೂಲದಿಂದ ಸಿಗುವ ಆದಾಯವು ಅಪ್ರತ್ಯಕ್ಷ ತೆರಿಗೆ ಎಂದು ಪರಿಗಣಿಸಲ್ಪಡದಿದ್ದರೂ, ಈ ಕ್ರಮದ ಪರಿಣಾಮ ಅಪ್ರತ್ಯಕ್ಷ ತೆರಿಗೆಯನ್ನೇ ಆಗಿದೆ. ನೇರವಾಗಿ ಈ ವಿಷಯಗಳ ಮೇಲೆ ಕೇಂದ್ರ ಅಬಕಾರಿ ತೆರಿಗೆ ವಿಧಿಸುವ ಬದಲು ಅವುಗಳ ಬೆಲೆಗಳನ್ನೇ ಏರಿಸಿದರೆ, ಕೇಂದ್ರ ಸರಕಾರಕ್ಕೆ ಸಂಪೂರ್ಣವಾಗಿ ಈ ಹೊಸ ಆದಾಯವು ಸೇರುವುದು. ಅಬಕಾರಿ ತೆರಿಗೆ ವಿಧಿಸಿದರೆ ಅದರಲ್ಲಿ ರಾಜ್ಯ ಸರಕಾರಗಳಿಗೆ ಪಾಲು ಕೊಡಬೇಕಾಗುವುದೆಂದು ಕಾಂಗ್ರೆಸ್ ಸರಕಾರ ಈ ಹೊಸ ಅನೈತಿಕ ಮಾರ್ಗ ಅನುಸರಿಸಲಾರಂಭಿಸಿದುದು. ಈ ಕ್ರಮದಿಂದ ಸರಕಾರ ತನ್ನ ತೆರಿಗಯ ಮೊತ್ತ ಕಡಿಮೆ ತೋರಿಸಿ, ಸಾರ್ವಜನಿಕ ಸಂಸ್ಥೆಗಳು ಹೆಚ್ಚು ಲಾಭ ಗಳಿಸುತ್ತಿವೆ ಎಂದು ಸಮರ್ಥಿಸಿ ಕೊಳ್ಳಲಾಗುತ್ತಿದೆ! ಜೀವನಾವಶ್ಯಕ ವಸ್ತುಗಳ ಹಾಗೂ ಸೇವಾ ಸೌಲಭಗಳ ಬೆಲೆಗಳನ್ನು ಏರಿಸುವುದರಿಂದ ಪುನಃ ದುಡಿಯುವ ಬಡ ಜನರ ಆದಾಯವೇ ಕ್ಷಯಿಸುವುದು, ಆದಾಯ ವಿತರಣೆಯ ಅಸಮಾನತೆ ಇನ್ನಷ್ಟೂ ಹೆಚ್ಚುವುದು.

ಹಣದುಬ್ಬರದ ಪರಿಣಾಮ:

ಆದಾಯದ ಅಸಮಾನತೆ ಹೆಚ್ಚುತ್ತಿರಲು ಆರ್ಥಿಕ ವ್ಯವಸ್ಥೆಯಲ್ಲಿನ ಹಣದುಬ್ಬರವು ಅಪ್ರತ್ಯಕ್ಷ ತೆರಿಗೆಗಿಂತಲೂ ಮೊದಲಿನ ಪ್ರಮುಖ ಕಾರಣವಾಗಿದೆ. ಭಾರತದಂತಹ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರದಿಂದಾಗಿ ಆದಾಯವು ದುಡಿಯುವ ಜನರಿಂದ ವ್ಯಾಪಾರಿಗಳಿಗೆ ಮತ್ತು ಭೂ ಮಾಲಕರಿಗೆ, ಬಂಡವಾಳಶಾಹಿಗಳಿಗೆ ಮರು ವಿತರಣೆಯಾಗುವುದು. ಕಾರಣ, ಹಣದ ರೂಪದ ವೇತನವು ಬೆಲೆ ಏರಿಕೆಗಿಂತ ಯಾವಾಗಲೂ ಹಿಂದುಳಿಯುವುದು. ವಿವಿಧ ಕ್ಷೇತ್ರದ ಕಾರ್ಮಿಕರ ವೇತನಗಳ ನಿಜ ಮೌಲ್ಯವು ವಿವಿಧ ದರಗಳಲ್ಲಿ ಇಳಿಮುಖವಾಗುವುದು. ಬಡ ರೈತರು ತಮ್ಮ ಫಸಲನ್ನು ಯೋಗ್ಯ ಬೆಲೆ ಬರುವ ತನಕ ಕಾಯ್ದಿಡಲು ಅಸಮರ್ಥರಾದುದರಿಂದ ಕೊಯ್ಲು ಆದೊಡನೆಯೇ ಅನಿವಾರ್ಯವಾಗಿ ಅದನ್ನು ಅಗ್ಗದಲ್ಲಿ ಮಾರುವುದರಿಂದಲೂ ಮುಂದೆ ಅವರ ಅಗತ್ಯತೆಗಳಿಗೆ ಪುನಃ ಏರಿಕೆಯ ಬೆಲೆಯ ಮಾರುಕಟ್ಟೆಗೆ ಬರಬೇಕಾಗುವುದರಿಂದ, ಅವರ ಆದಾಯದ ನಿಜ ಮೌಲ್ಯವು ಹಣ ದುಬ್ಬರದಿಂದಾಗಿ ಕ್ಷಯಿಸುತ್ತಿರುವುದು. ಜೊತೆಗೇ ಬಂಡವಾಳ ಶಾಹಿಗಳ ಲಾಭವು ಹೆಚ್ಚುತ್ತಿರುವುದು. ಹೀಗಾಗಿ, ದುಡಿಯುವ ಜನರ ಮತ್ತು ಬಂಡವಾಳ ಶಾಹಿಗಳ ನಡುವೆ ಆದಾಯದ ವಿತರಣೆಯಲ್ಲಿ ಇನ್ನಷ್ಟು ಅಸಮಾನತೆ ಹೆಚ್ಚುತ್ತಿರುವುದು.

ಹಣದುಬ್ಬರವು ನಿರಂತರವಾಗಿ ಹೆಚ್ಚುತ್ತಿರುವುದು [ಕೋಷ್ಟಕ 9] ಸಗಟು ಮಾರುಕಟ್ಟೆಯ ಬೆಲೆ ಸೂಚಿ 1952-53 ರಲ್ಲಿ .00 ಆಗಿದ್ದರೆ, ಅಕ್ಟೋಬರ್, 1984 ರಲ್ಲಿ 83 ಕ್ಕೇರಿದೆ, ಹಾಗೆಯೇ ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚಿಯು 1949 ರಲ್ಲಿ 100 ಆಗಿದ್ದರೆ, ಸೆಪ್ಟಂಬರ್, 1984 ರಲ್ಲಿ 716 ಕ್ಕೇರಿದೆ. ಅಂದರೆ ಏಳು ಪಟ್ಟು ಹೆಚ್ಚಾಗಿದೆ! ಹಣ ದುಬ್ಬರ ಹೆಚ್ಚಲು ವರ್ಷ ವರ್ಷಕ್ಕೂ ಅಪ್ರತ್ಯಕ್ಷ ತೆರಿಗೆ ಹೆಚ್ಚಳದೊಂದಿಗೇ ಮುಂಗಡ ಪತ್ರದಲ್ಲಿನ ಕೊರತೆ ಹಣ-ಕೃತಕ ಹಣ ಸೃಷ್ಟಿ-ಉತ್ಪಾದನೆಯ ಮೊದಲೇ ಹಣ ಸೃಷ್ಟಿಸಿ ಆರ್ಥಿಕ ವ್ಯವಸ್ಥೆಯಲ್ಲಿ ಹರಿಯಬಿಡುವುದೇ ಮುಖ್ಯ ಕಾರಣ. (ಕೋಷ್ಟಕ 10) ಕೃತಕ ಹಣ ಸೃಷ್ಟಿ 1947-52 ರ ಅವಧಿಯಲ್ಲಿ ವರ್ಷಕ್ಕೆ ಸರಾಸರಿ ರೂ 45 ಕೋಟಿಯಾಗಿದ್ದರೆ, 1977-82 ರ ಅವಧಿಯಲ್ಲಿ ವಾರ್ಷಿಕ ಸರಾಸರಿ ರೂ 1770 ಕೋಟಿಗೇರಿತ್ತು. 1982-83 ರಲ್ಲಿ ರೂ 3399 ಕೋಟಿಗೇರಿತ್ತು!

ಹೆಚ್ಚುತ್ತಿರುವ ಹಣದುಬ್ಬರಕ್ಕೆ ಕಾಂಗ್ರೆಸ್ ಸರಕಾರದ ಹಣಕಾಸು ನೀತಿಯೇ ಮುಖ್ಯ ಕಾರಣ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉದ್ದೇಶಪೂರ್ವಕವಾಗಿ ಅಪ್ರತ್ಯಕ್ಷ ತೆರಿಗೆಯಿಂದ, ಆಡಳಿತ ನಿರ್ದೇಶನದಿಂದ ಮತ್ತು ಕೃತಕ ಹಣ ಸೃಷ್ಟಿಯಿಂದ ದುಡಿಯುವ ಬಡಜನರನ್ನು ಶೋಷಿಸಿ ಬಂಡವಾಳ ಶಾಹಿಗಳಿಗೆ, ಭೂ ಮಾಲಕರಿಗೆ, ವ್ಯಾಪಾರಿಗಳಿಗೆ ಬೇಕಾದ ಬಂಡವಾಳವನ್ನೂ, ಸಾಲ ಸಹಾಯ ರಿಯಾಯತಿಗಳನ್ನೂ, ಲಾಭ ಗಳಿಕೆಯನ್ನು ಕಾಂಗ್ರೆಸ್ ಸರಕಾರ ಒದಗಿಸಿ ಕೊಡುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ ಅನಿವಾರ್ಯವೆಂದೂ ಅಗತ್ಯವೆಂದೂ ಕಾಂಗ್ರೆಸ್ ಸರಕಾರದ ವಕ್ತಾರರು ವಾದಿಸುತ್ತಿದ್ದಾರೆ. ಹಣದುಬ್ಬರವು ಜಾಗತಿಕ ವಿದ್ಯಾಮಾನವೆಂದು ಕಾಂಗ್ರೆಸ್ ಸರಕಾರ ಬೆಲೆ ನಿಯಂತ್ರಿಸುವ ತನ್ನ ಹೊಣೆಗಾರಿಕೆಯನ್ನು ಜಾರಿಸಿ ಕೊಳ್ಳುತ್ತಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಅಪ್ರತ್ಯಕ್ಷ ತೆರಿಗೆಯು ಹೆಚ್ಚುತ್ತಿರುವುದು ಅಗತ್ಯವೂ ಅನಿವಾರ್ಯವೂ ಆಗಿದೆ ಎಂದು ಅರ್ಥಮಂತ್ರಿ ಪ್ರಣಬ್‌ಮುಖರ್ಜಿ ವಾದಿಸುತ್ತಿದ್ದಾರೆ.

ಬಡವರ ಮೇಲೆ ಭಾರ :

ಈ ಮೊದಲೇ ತಿಳಿಸಿದಂತೆ, ಅಪ್ರತ್ಯಕ್ಷ ತೆರಿಗೆ, ಅವಶ್ಯಕ ವಸ್ತುಗಳ ಬೆಲೆ ಏರಿಕೆ ಮತ್ತು ಕೃತಕ ಹಣ ಸೃಷ್ಟಿ ಇವೆಲ್ಲವುಗಳ ಭಾರ ದುಡಿಯುವ ಜನರ ಮೇಲೆಯೇ ಬೀಳುವುದು. ಅವರ ಆದಾಯ ಹಾಗೂ ಗ್ರಾಹಕ ಶಕ್ತಿ ಕ್ಷಯಿಸುತ್ತಿರುವುದು. ಅಪ್ರತ್ಯಕ್ಷ ತೆರಿಗೆಯ ಕುರಿತಾದ 1974-75 ರ ಅಧಿಕೃತ ಸಮಿತಿಯೊಂದರ ಸಮೀಕ್ಷೆಯಂತೆ, ಶೇ 55 ರಷ್ಟು ಅಪ್ರತ್ಯಕ್ಷ ತೆರಿಗೆಯು ಆದಾಯವು ತಿಂಗಳಿಗೆ ರೂ 500 (ತಲಾ ರೂ 100) ಅಥವಾ ಕಡಿಮೆ ಖರ್ಚು ಮಾಡುತ್ತಿರುವ ಬಡಕುಟುಂಬಗಳಿಂದಲೇ ಸಂಗ್ರಹಿಸಲಾಗುತ್ತಿದೆ. ಎಂದು ತಿಳಿದು ಬಂದಿದೆ. ಈ ಬಡ ಕುಟುಂಬಗಳ ವೆಚ್ಚ ಯಾವಾಗಲೂ ಆದಾಯಕ್ಕಿಂತ ಹೆಚ್ಚಾಗಿರುವುದರಿಂದ ಹಣದುಬ್ಬರದಿಂದಾಗಿ, ಅಪ್ರತ್ಯಕ್ಷ ತೆರಿಗೆಯಿಂದಾಗಿ ಇವುಗಳು ನಿರಂತರ ಸಾಲದಲ್ಲಿಯೇ ಇರುವುವು. ಭಾರತದ ಆರ್ಥಿಕ ಅಭಿವೃದ್ಧಿಗೆ, ಸರಕಾರದ ವೆಚ್ಚಕ್ಕೆ, ಈ ಬಡ ಕುಟುಂಬಗಳು ಭಾರ ಹೊರ ಬೇಕಾಗಿದೆ. ಇದೆ ಕಾಂಗ್ರೆಸ್‌ನ ಸಾಮಾಜಿಕ ನ್ಯಾಯ, ಗರೀಬಿ ಹಟಾವೋ ಸಮಾಜವಾದ!

[6ನೇ ಪುಟ ನೋಡಿ]

ರಾಜೀವ್ ಗಾಂಧಿಯ ಚುನಾವಣಾ ಅಪ ಪ್ರಚಾರಗಳಿಗೆ

[ತನ್ನ ಪಕ್ಷದ "ಸಾಧನೆ"ಗಳ ಬಗ್ಗೆ ಮೌನವಾಗಿದ್ದು, ಕೇವಲ ವಿರೋಧ ಪಕ್ಷಗಳ ಮೇಲೆ, ವಿಶೇಷವಾಗಿ ಸಿ. ಪಿ. ಐ. (ಎಂ) ಮೇಲೆ ಬುಡವಿಲ್ಲದ ಆಪಾದನೆಗಳನ್ನು ಒಂದೇ ಸಮನೆ ಪುನರುಚ್ಚರಿಸುತ್ತಾ ಹೋಗುತ್ತಿದ್ದುದು ರಾಜೀವ್ ಗಾಂಧಿಯವರ ಚುನಾವಣಾ ಪ್ರಚಾರದ ಪ್ರಮುಖ ಲಕ್ಷಣವಾಗಿತ್ತು. ಇದಕ್ಕೆ ಸಿಪಿಐ (ಎಂ) ಮುಖಂಡರೂ ಹಾಗೂ ಇತರ ವಿರೋಧ ಪಕ್ಷಗಳ ಮುಖಂಡರೂ ಕೂಡಾ ಸರಿಯಾದ ಉತ್ತರ ನೀಡಿದ್ದರೂ ಸರಕಾರೀ ಪ್ರಸಾರ ಮಾಧ್ಯಮಗಳಾದ ಆಕಾಶವಾಣಿ, ದೂರದರ್ಶನಗಳು ಮಾತ್ರವಲ್ಲ "ಸ್ವಾತಂತ್ರ್ಯಪ್ರಿಯರು" ಎಂದು ಹೇಳಿಕೊಳ್ಳುವ ಹೆಚ್ಚಿನ ಪತ್ರಿಕೆಗಳೂ ಇದಕ್ಕೆ ಸರಿಯಾದ ಪ್ರಚಾರ ನೀಡಲಿಲ್ಲ.

ಈ ರೀತಿ ರಾಜೀವ್ ಗಾಂಧಿಯ ಸುಳ್ಳಿನ ಕಂತೆಗಳಿಗೆ, ತೀಕ್ಷ್ಣ ಸವಾಲೊಡ್ಡಿದ ಕಾಂ|| ಇ. ಎಂ. ಎಸ್. ಹಾಗೂ ಕಾಂ. ಸುರ್ಜಿತ್‌ರವರ ಎರಡು ಬಹಿರಂಗ ಪತ್ರಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಇ. ಎಂ. ಎಸ್. ಪಾಲ್ ಘಾಟನಿಂದ ಡಿಸೆಂಬರ್ 10 ರಂದು ಬರೆದ ಬಹಿರಂಗ ಪತ್ರದ ಪೂರ್ಣಪಾಠವನ್ನು ಹಾಗೂ ಸುರ್ಜಿತ್‌ರವರು ಡಿಸೆಂಬರ್ 11 ರಂದು ಬರೆದ ಬಹಿರಂಗ ಪತ್ರದ ಸಾರಂಶವನ್ನು ಇಲ್ಲಿ ಕೊಡಲಾಗಿದೆ. ಡಿಸೆಂಬರ್ 22 ರಂದು ಬೆಂಗಳೂರಿನಲ್ಲಿ ರಾಜೀವ್ ಗಾಂಧಿ "ಸಿ. ಪಿ. ಐ. (ಎಂ) ಆನಂದ್‌ಪುರ ಸಾಹೀಬ್ ನಿರ್ಣಯವನ್ನು 'ವಿಘಟನೆಯ ಬೇಡಿಕೆ' ಎಂದಿತ್ತು" ಎಂಬುದಾಗಿ ಕೊನೆಗೂ ಮಾತು ಬದಲಿಸಲು ಕಾರಣ ಈ ಪತ್ರಗಳನ್ನು ಓದಿದರೆ ಸ್ಪಷ್ಟವಾಗುತ್ತದೆ.]

"ಪ್ರಧಾನ ಮಂತ್ರಿಯಾಗಿ ನೀವು ಪ್ರತಿಜ್ಞೆ ಸ್ವೀಕರಿಸಿ ಏಳು ವಾರಗಳು ಕಳೆದು ಹೋಗಿವೆ. ಹದಿನೈದು ದಿನಗಳೊಳಗೆ ನಡೆಯಲಿರುವ ಚುನಾವಣೆಗಳಲ್ಲಿ ಜನತೆ ನೀವು ಮಾಡಿರುವ ಹಾಗೂ ಮಾಡದಿರುವ ಕೆಲಸಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿದ್ದಾರೆ.

ನೀವು ಪ್ರಧಾನ ಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದಾಗ ನನ್ನ ಪಕ್ಷ ಅದಕ್ಕೆ ಅಡ್ಡಿ ವ್ಯಕ್ತಪಡಿಸಲಿಲ್ಲ ಅಥವಾ ಅನುಮೋದನೆಯನ್ನೂ ಸೂಚಿಸಲಿಲ್ಲ. ಆಗಿದ್ದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಿಮ್ಮ ಮುಖಂಡತ್ವದಲ್ಲಿರುವ ಸರಕಾರ ಹಾಗೂ ವಿರೋಧ ಪಕ್ಷಗಳ ಎದುರಿದ್ದ ತತ್‌ಕ್ಷಣದ ಕರ್ತವ್ಯವೆಂದರೆ ಅಮಾನುಷ ನರಮೇಧವನ್ನು ತಕ್ಷಣ ನಿಲ್ಲಿಸಲು ಕ್ರಮ ಕೈಗೊಳ್ಳುವುದು ಎಂದು ನಾವು ಭಾವಿಸಿದೆವು. ಆದ್ದರಿಂದಲೇ ನಿಮ್ಮನ್ನು ಪ್ರಧಾನ ಮಂತ್ರಿಯಾಗಿಸಿದ ಬಗೆ ವಿರೋಧ ವ್ಯಕ್ತಪಡಿಸಿದ ನಮ್ಮ ಕೆಲವರು ಗೆಳೆಯರ ಜತೆ ನಾವು ಸೇರಲಿಲ್ಲ.

ಕಳೆದ ಚುನಾವಣೆಗಳಲ್ಲಿ ಬಹುಸಂಖ್ಯೆಯ ಸ್ಥಾನಗಳನ್ನು ನಿಮ್ಮ ಪಕ್ಷ ಅಲ್ಪ ಸಂಖ್ಯೆಯ ಮತಗಳಿಂದ ಪಡೆದಿದ್ದರೂ ಕೂಡಾ ಕೊಲೆಗೀಡಾದ ಪ್ರಧಾನಮಂತ್ರಿಯ ಸ್ಥಾನದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ಮುಖಂಡರ ಆಯ್ಕೆ ಕಾಂಗ್ರೆಸ್ ಪಕ್ಷದ್ದೇ ಎಂದು ನಮ್ಮ ವಿಚಾರವಾಗಿತ್ತು.

ಆದರೆ ಸಾಮಾನ್ಯ ಪರಿಜ್ಞಾನವೂ ಇಲ್ಲದ ನಿಮ್ಮ ಪಕ್ಷದ ಕೆಲವು ಜನ ನಾವು ನಿಮ್ಮ ಆಯ್ಕೆಯನ್ನು ಅನುಮೋದಿಸಿದ್ದೇವೆ ಎಂಬ ಭಾವನೆಯನ್ನು ಹರಡಿಸಿದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಹಿಂದಿನ ಒಪ್ಪಿಗೆಯ ಹಿನ್ನೆಲೆಯಲ್ಲಿ ನಾವು ಮುಂಬರುವ ಚುನಾವಣೆಗಳಲ್ಲಿ ನಿಮ್ಮನ್ನು ಪ್ರಧಾನ ಮಂತ್ರಿಯಾಗಿ ಕೂರಿಸಲು ಅನುಕೂಲವಾದ ಸನ್ನಿವೇಶ ನಿರ್ಮಿಸಲು ಬದ್ಧರಾಗಿದ್ದೇವೆ ಎಂದೂ ಹೇಳಲಾರಂಭಿಸಿದರು. ನಿಮ್ಮ ಅನುಯಾಯಿಗಳಿಗೆ ಕೊಲೆಗೀಡಾದ ಪ್ರಧಾನ ಮಂತ್ರಿಯ ಸ್ಥಾನದಲ್ಲಿ ಒಬ್ಬರು ನಾಯಕರ ಆಯ್ಕೆ ಹಾಗೂ ಮುಂಬರುವ ಚುನಾವಣೆಗಳಲ್ಲಿ ಆ ಪಕ್ಷದ ವಿಜಯ ಈ ಎರಡರ ನಡುವಿನ ವ್ಯತ್ಯಾಸವೂ ತಿಳಿಯುವುದಿಲ್ಲವೆನ್ನುವುದು ಆಶ್ಚರ್ಯಕರ.

ಕಡು ವಿರೋಧಿ

ನನ್ನ ಪಕ್ಷ 33 ವರ್ಷಗಳ ಹಿಂದೆ ನಡೆದ ಮೊದಲ ಸಾರ್ವತ್ರಿಕ ಚುನಾವಣೆಗಳಿಂದಲೂ ನಿಮ್ಮ ಪಕ್ಷದ ಅತ್ಯಂತ ಕಡು ವಿರೋಧಿಯಾಗಿತ್ತು. ಈಗಲೂ ಆಗಿದೆ. ಸ್ವಾತಂತ್ರ್ಯಾನಂತರ ನಿಮ್ಮ ಪಕ್ಷ ಅನುಸರಿಸಿದ ಧೋರಣೆಗಳು ದೇಶದ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ ಎಂಬುದನ್ನು ನಾವು ಕಂಡುಕೊಂಡದ್ದರಿಂದ ನಾವು ಈ ರೀತಿಯ ನಿಲುವು ತಳೆದವು. ಅದೇ ಹೊತ್ತಿಗೆ ನಮ್ಮ ಮಿಲಿಯಗಟ್ಟಲೆ ಬಡತನಪೀಡಿತ ಶ್ರಮಜೀವಿ ಜನಸಾಮಾನ್ಯರ ಹಿತಾಸಕ್ತಿಗಳನ್ನು ಕಾಪಾಡಲು ಪರ್ಯಾಯವಾದ ಧೋರಣೆಗಳನ್ನು ರೂಪಿಸಿದೆವು. ನಿಮ್ಮ ಪಕ್ಷವನ್ನು ನಾವು ವಿರೋಧಿಸಿದ್ದುದರ ಆಧಾರ ಇದೇ. ಆದರೆ ಜನತೆಯ ಕಲ್ಯಾಣದ ಗುರಿಯಿಟ್ಟುಕೊಂಡು ಯಾವುದೇ ಧೋರಣೆಯನ್ನು ನೀವು ಮುಂದಿಟ್ಟಾಗ ಅದನ್ನು ಬೆಂಬಲಿಸುವಲ್ಲಿಯೂ ನಾವು ಹಿಂದೆ-ಮುಂದೆ ನೋಡಲಿಲ್ಲ.

ಉದಾಹರಣೆಗೆ, ಪಂಡಿತ್ ನೆಹರೂ ಪ್ರಧಾನ ಮಂತ್ರಿಯಾಗಿದ್ದಾಗ ಅವರು ಅನುಸರಿಸಿದ ವಿದೇಶೀ ಧೋರಣೆಯಲ್ಲಿ ಗಂಭೀರ ನ್ಯೂನತೆಗಳಿದ್ದರೂ ಸಾಮಾನ್ಯವಾಗಿ ಹೇಳುವುದಾದರೆ ಅದು ಜನತೆಯ ಹಿತಾಸಕ್ತಿಗಳಿಗೆ ಅನುಗುಣವಾಗಿತ್ತು. ಇಂದಿರಾಗಾಂಧಿಯವರು ಕೂಡಾ ಅದೇ ಮಾರ್ಗ ಅನುಸರಿಸಿದರು. ಆದ್ದರಿಂದಲೇ, ಒಂದೆಡೆ ಇವರಿಬ್ಬರ ವಿದೇಶೀ ಧೋರಣೆಗಳಲ್ಲಿನ ದೌರ್ಬಲ್ಯಗಳನ್ನು ಬಯಲಿಗೆಳೆಯುತ್ತಾ, ಇನ್ನೊಂದೆಡೆಗೆ ಸಾಮಾನ್ಯವಾಗಿ ಅವನ್ನು ಬೆಂಬಲಿಸಿದೆವು.

ಆದರೆ ಪಂಡಿತ್ ನೆಹರೂ ಹಾಗೂ ಇಂದಿರಾಗಾಂಧಿಯವರ ಆಂತರಿಕ ಧೋರಣೆ ಜನ-ವಿರೋಧಿಯಾಗಿತ್ತು. ಅದನ್ನು ತೀವ್ರವಾಗಿ ನಾವು ವಿರೋಧಿಸಿದೆವು. ಆದ್ದರಿಂದಲೇ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸಲು ನಾವು–ಇತರ ಪಕ್ಷಗಳ ಜತೆಗೂಡುವ ಕಾರ್ಯತಂತ್ರ ಅನುಸರಿಸಿರುವುದು.

ವೈಯಕ್ತಿಕ ವಿರೋಧವಲ್ಲ

ಇಂತಹ ಒಂದು ಧೋರಣೆಯನ್ನು ಅನುಸರಿಸುತ್ತಿರುವಾಗಲೂ, ಅವರಿಬ್ಬರು ಕೈಗೊಂಡ ಯಾವುದೇ ಪ್ರಗತಿಶೀಲ ಕ್ರಮವನ್ನು ನಾವು ಸದಾ ಸ್ವಾಗತಿಸುತ್ತಾ ಬಂದೆವು. ನಿಜವಾಗಿ ಕೇರಳದಲ್ಲಿ ಪ್ರಥಮ ಕಮ್ಯುನಿಸ್ಟ್ ಮಂತ್ರಿಮಂಡಳದ ಮುಖ್ಯಸ್ಥನಾಗಿ ಅಧಿಕಾರ ವಹಿಸಿಕೊಂಡಾಗ "ನಾವು ಕಾಂಗ್ರೆಸ್ಸಿನ ಪ್ರಗತಿಪರ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸುತ್ತೇವೆ" ಎಂದೇ ಘೋಷಿಸಿದ್ದೆ. ನಂತರ ಇಂದಿರಾಗಾಂಧಿಯವರು ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದುದರ ಫಲವಾಗಿ ಉಂಟಾದ ರಾಜಕೀಯ ಬಿಕ್ಕಟ್ಟಿನಲ್ಲಿ ನಮ್ಮ ಬೆಂಬಲ ನೀಡುವುದರಲ್ಲಿ ನಮ್ಮ ಪಕ್ಷ ಯಾವ ರೀತಿಯಲ್ಲೂ ಹಿಂದೇಟು ಹಾಕಲಿಲ್ಲ.

ಆದ್ದರಿಂದ ನೆಹರೂ-ಇಂದಿರಾ ಆಡಳಿತಗಳಿಗೆ ನಮ್ಮ ವಿರೋಧ ವೈಯಕ್ತಿಕ ಸ್ವರೂಪದ್ದಾಗಿರದೆ ರಾಜಕೀಯಹಾಗೂ ಆರ್ಥಿಕ ಧೋರಣೆಗಳನ್ನು ಆಧರಿಸಿತ್ತು. ಇದಕ್ಕೆ ಇನ್ನೊಂದು ಉದಾಹರಣೆ ಬೇಕಿದ್ದರೆ 1983ರ ಅಕ್ಟೋಬರ್‌ನಲ್ಲಿ ನಾನು ಇಂದಿರಾ ಗಾಂಧಿಯವರ ಜತೆ ನಡೆಸಿದ ಮಾತುಕತೆಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಾನು ಆಕೆಗೆ ಮೂರು ವಿಷಯಗಳನ್ನು ವಿವರಿಸಿದೆ.

ಒಂದು : ಅಂತರ ರಾಷ್ಟ್ರೀಯ ಪ್ರಶ್ನೆಗಳಲ್ಲಿ ಹಲವುಗಳ ಬಗ್ಗೆ ನಮ್ಮಲ್ಲಿ ಒಮ್ಮತಕ್ಕೆ ಆಧಾರವಿದೆ. ಅದೇ ಹೊತ್ತಿಗೆ ಇನ್ನೂ ಕೆಲವದರ ಬಗ್ಗೆ ನಾವು ಭಿನ್ನಾಭಿಪ್ರಾಯ ಹೊಂದಿದ್ದೇವೆ. ಆದ್ದರಿಂದ ಪ್ರತಿಯೊಂದೂ ಪ್ರಶ್ನೆಯ ಬಗ್ಗೆ ನಿಲುವಿನ ಯೋಗ್ಯತೆಯ ಆಧಾರದ ಮೇಲೆ ನಾವು ಸಹಕಾರ ನೀಡಲು ಸಿದ್ಧರಾಗಿದ್ದೇವೆ.

ಎರಡು : ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಗಳ ಬಗ್ಗೆ ಕೇವಲ ಘೋಷಣೆಗಳ ಆಧಾರದಿಂದಲೇ ಹೇಳುವುದಾದರೆ ಎರಡೂ ಪಕ್ಷಗಳದ್ದೂ ಸಮಾನರೀತಿಯ ದೃಷ್ಟಿಕೋನವೆಂದೆನಿಸುತ್ತದೆ. ಆದರೆ –ಈ ಘೋಷಣೆಗಳನ್ನು ಕಾರ್ಯರೂಪಕ್ಕೆ ಇಳಿಸುವ ಪ್ರಶ್ನೆ ಬಂದಾಗ ನಮ್ಮೆರಡೂ ಪಕ್ಷಗಳು ಎಂದಿನಂತೆಯೇ ಪರಸ್ಪರ ಬಹಳ ಭಿನ್ನವಾದ ಅಭಿಪ್ರಾಯ ಹೊಂದಿವೆ.

ಮೂರು : ಆರ್ಥಿಕ ಧೋರಣೆಗಳಿಗೆ ಸಂಬಂಧ ಪಟ್ಟಂತೆ ನಮ್ಮೆರಡು ಪಕ್ಷಗಳ ನಡುವೆ ಧ್ರುವಗಳ ಅಂತರವಿದೆ. ಈ ಅಂಶಕ್ಕೆ ಉದಾಹರಣೆ ನೀಡಲು ನಾನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ನಾಲ್ಕನೇ ಯೋಜನೆಯ ಕರಡಿಗೆ ವಿರುದ್ಧವಾಗಿ ಮತ ಹಾಕಿದಾಗ ತಳೆದ ನಿಲುವನ್ನು ಜ್ಞಾಪಕ ಮಾಡಿಕೊಟ್ಟೆ. ನಂತರದ ವರ್ಷಗಳಲ್ಲಿ ಜ್ಯೋತಿ ಬಸು, ನೃಪೇನ್ ಚಕ್ರವರ್ತಿ ಮತ್ತು ನಯನಾರ್ ಅದೇ ನಿಲುವು ತಳೆದರು.

ಇತಿಹಾಸ ಜ್ಞಾಪಿಸಿಕೊಳ್ಳಬೇಕು

ಈ ಎಲ್ಲಾ ಚಾರಿತ್ರಿಕ ಸಂಗತಿಗಳತ್ತ ನಿಮ್ಮ ಗಮನ ಸೆಳೆಯುವುದು ಅವಶ್ಯಕ ಎಂದು ನಾನು ಭಾವಿಸುತ್ತೇನೆ. ಯಾಕೆಂದರೆ ನೆಹರೂ ಹಾಗೂ ಇಂದಿರಾ ಗಾಂಧಿಯವರ ಹೆಜ್ಜೆಗಳನ್ನೇ ಅನುಸರಿಸುವುದಾಗಿ ನೀವು ಬಾರಿ ಬಾರಿಗೂ ಘೋಷಿಸುತ್ತಿದ್ದೀರಿ. ನಾವು ಈಗ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟಿಗೆ ದೇಶವನ್ನು ತಂದಿರಿಸಿದ್ದು ನಿಮಗೆ ಮೊದಲು ಆಳ್ವಿಕೆ ನಡೆಸಿದವರ ಧೋರಣೆಗಳೇ ಎಂಬುದು ನನ್ನ ದೃಢ ನಂಬಿಕೆ.

ನೀವು ದಯವಿಟ್ಟು ಇಂದಿರಾ ಗಾಂಧಿಯವರ ಕೊಲೆಯ ಕಾರಣಗಳ ಬಗ್ಗೆ, ನಂತರ ನಿಮ್ಮ ಕಣ್ಣು ಮುಂದೆಯೇ ನಡೆದ ಸಿಖ್ – ವಿರೋಧೀ ದಂಗೆಗಳ ಬಗ್ಗೆ, ಆಕೆಯ ಚಿತಾಭಸ್ಮವನ್ನು ತೆಗೆದುಕೊಂಡು ಹೋಗುವಲ್ಲಿ ನಡೆದ ಆಂತರಿಕ ಜಗಳಗಳ ಬಗ್ಗೆ, ಹಾಗೂ ಕೊನೆಯದಾಗಿ ಸ್ಥಾನಗಳ ಹಂಚಿಕೆಯ ಮೇಲೆ ನಿಮ್ಮ ಪಕ್ಷದಲ್ಲಿ ನಡೆದ ಬಂಡಾಯದ ಬಗ್ಗೆ ಯೋಚಿಸಲು ಹಾಗೂ ಅದನ್ನು ಸತ್ಯ ಪೂರ್ಣವಾಗಿ ವಿಶ್ಲೇಷಿಸಲು ಒಂದು ಕ್ಷಣ ಬಿಡುವು ಮಾಡಿಕೊಳ್ಳ ಬಹುದೇ ? 33 ವರ್ಷಗಳ ಹಿಂದೆ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಂದಿನಿಂದ ವಿರೋಧ ಪಕ್ಷಗಳು ಮಾಡುತ್ತಿರುವ ಟೀಕೆಗಳಲ್ಲಿ ಏನಾದರೂ ಸತ್ಯಾಂಶವಿದೆಯೇ ಎಂದು ತಿಳಿದುಕೊಳ್ಳುವ ಅಗತ್ಯ ಕೂಡಾ ಇಲ್ಲ ಎಂದು ನೀವು ಭಾವಿಸುತ್ತೀರಾ ?

ನಾಚಿಕೆಯಿಲ್ಲದ ಸುಳ್ಳು

ಇಂದಿರಾ ಗಾಂಧಿಯವರ ಕೊಲೆಯೊಂದಿಗೆ ಅಂತ್ಯಗೊಂಡಿರುವ ಪಂಜಾಬ್ ಸಮಸ್ಯೆಯನ್ನೇ ಎತ್ತಿಕೊಳ್ಳೋಣ. ಅಕಾಲಿ ದಳವೂ ಸೇರಿದಂತೆ ವಿರೋಧ ಪಕ್ಷಗಳು ಪ್ರಸ್ತುತಪಡಿಸಿರುವ ಪರಿಹಾರವನ್ನು ಪರಿಶೀಲಿಸಲು ನೀವು ಸಿದ್ಧರಿದ್ದೀರಾ ? ಇಲ್ಲಿ ಗಮನಿಸಬೇಕಾದ ತಥ್ಯ ವೇನೆಂದರೆ ಆ ಪರಿಹಾರದಲ್ಲಿ ಆನಂದ್‌ಪುರ್ ನಿರ್ಣಯದ ಬಗ್ಗೆ ಒಂದು ಚಕಾರ ಶಬ್ದವೂ ಇರಲಿಲ್ಲ.

ಆನಂದ್‌ಪುರ್ ನಿರ್ಣಯ ಮಾತ್ರವೇ ಅಲ್ಲ, ಸಿಖ್ಖರು ಒಂದು ದೇಶ ಎಂಬ ಮೂಲ ಭೂತ ಸಿದ್ಧಾಂತವೇ ತಪ್ಪು ಎಂದು ಸಿಖ್ಖರ ನಡುವೆ ಪ್ರಚಾರ ಮಾಡುತ್ತಾ ಬಂದಿರುವ ಒಂದು ಪಕ್ಷ ನಮ್ಮದು. ನಾವು ಆನಂದ್‌ಪುರ ನಿರ್ಣಯವನ್ನು ಬೆಂಬಲಿಸಿದೆವು ಎಂದು ನಾಚಿಕೆಯಿಲ್ಲದೆ ಸುಳ್ಳು ಹೇಳಲು ನಿಮಗೆ ಬಾಯಾದರೂ ಹೇಗೆ ಬಂತು ಎಂದು ನನಗೆ ಆಶ್ಚರ್ಯವಾಗುತ್ತದೆ.

ನಮ್ಮ ಬಗ್ಗೆ ನಾಚಿಕೆ ವಿಹೀನ ಸುಳ್ಳುಗಳನ್ನು ಪುನರುಚ್ಚರಿಸುವ ಸಾಮರ್ಥ್ಯವನ್ನು ನೀವು ನಿಮ್ಮ ತಾಯಿಯಿಂದ ಬಳುವಳಿಯಾಗಿ ಪಡೆದಿದ್ದೀರಿ ಎಂದು ನಾನು ನಂಬಬೇಕಾಗಿ ಬಂದಿದೆ. ವಿರೋಧ ಪಕ್ಷಗಳ ಮೇಲೆ ಸುಳ್ಳು ಆರೋಪಗಳನ್ನು ಹೊರಿಸುವುದು ಹಾಗೂ ಅವುಗಳೊಂದಿಗೆ ಘರ್ಷಣೆಗಿಳಿಯುವುದು ಇಂದಿರಾ ಗಾಂಧಿಯವರ ರಾಜಕೀಯದ ಪ್ರಮುಖ ಲಕ್ಷಣಗಳಾಗಿದ್ದವು. ಐವತ್ತರ ದಶಕದ ಕೊನೆಯ ಭಾಗದಲ್ಲಿ ಆಗಿನ ಕೇರಳ ಮಂತ್ರಿಮಂಡಲವನ್ನು ಉರುಳಿಸಲು ಆಕೆ ಸಂಘಟಿಸಿದ "ವಿಮೋಚನಾ ಸಮರ"ದಂತಹ ಕಮ್ಯೂನಿಸ್ಟ್—ವಿರೋಧೀ ಪ್ರಚಾರಗಳಿಂದ ಆರಂಭಿಸಿ ಇತ್ತೀಚೆಗಿನ ಕಾಶ್ಮೀರ—ಆಂಧ್ರ ಪ್ರಕರಣಗಳು ಆಕೆಯ ಪ್ರಜಾಪ್ರಭುತ್ವ—ವಿರೋಧೀ ಸ್ವಭಾವವನ್ನು ಪ್ರತಿ ಫಲಿಸುತ್ತಿವೆ. ಕೇರಳದಲ್ಲಿ ಆಕೆ ಸಂಘಟಿಸಿದ್ದು ಕಮ್ಯು

– ಇ. ಎಂ. ಎಸ್. ನಂಬೂದಿರಿಪಾಡ್

ಸವಾಲೊಡ್ಡಿದ ಎರಡು ಬಹಿರಂಗ ಪತ್ರಗಳು

"ನಮ್ಮ ದೇಶದ ಇತಿಹಾಸದ ಒಂದು ಬಿಕ್ಕಟ್ಟಿನ ಸಮಯದಲ್ಲಿ ನೀವು ಪ್ರಧಾನ ಮಂತ್ರಿಯ ಜವಾಬ್ದಾರಿ ಹೊರ ಬೇಕಾಗಿ ಬಂತು. ದೇಶದ ಐಕ್ಯತೆ ಹಾಗೂ ಸಾಮ್ರಾಜ್ಯ ಶಾಹೀ ಪಿತೂರಿಗಳಿಂದ ಅದಕ್ಕಿರುವ ಅಪಾಯದ ಪ್ರಶ್ನೆಯ ಬಗ್ಗೆ ಒಂದು ಒಮ್ಮತಾಭಿಪ್ರಾಯವನ್ನು ರೂಪಿಸಿ ತನ್ಮೂಲಕ ಈ ಅಪಾಯದ ವಿರುದ್ಧ ದೇಶದ ಸಮಸ್ತ ಜನತೆಯನ್ನು ಜಾಗೃತಗೊಳಿಸುತ್ತೀರೆಂದು ನಿಮ್ಮಿಂದ ನಿರೀಕ್ಷಿಸಲಾಗಿತ್ತು. ಆದರೆ ಹೀಗೆ ಮಾಡುವ ಬದಲು ನೀವು ವಿರೋಧ ಪಕ್ಷಗಳು ಯಾವ ಪ್ರಶ್ನೆಗಳಿಗೆ ಪರಿಹಾರ ಕಂಡು ಹಿಡಿಯಲು ಸಾಕಷ್ಟು ನೆರವು ನೀಡಿದವೋ ಅವೇ ಪ್ರಶ್ನೆಗಳನ್ನು ಕುರಿತಂತೆ ಅವುಗಳ ಮೇಲೆ ಪ್ರಹಾರ ನಡೆಸಲಾರಂಭಿಸಿದಿರಿ. ಬುಡವಿಲ್ಲದ ಆಪಾದನೆಗಳನ್ನು ಹೊರಿಸಿ ವಿರೋಧ ಪಕ್ಷಗಳ ಹೆಸರು ಕೆಡಿಸಲು ಸಮಸ್ತ ಸುದ್ದಿ ಮಾಧ್ಯಮಗಳನ್ನು ಬಳಸಿದಿರಿ. ಇದು ಯಾವ ರೀತಿಯಲ್ಲೂ ನಿಮ್ಮ ಘನತೆಯನ್ನು ಹೆಚ್ಚಿಸುವುದಿಲ್ಲ. ಯಾಕೆಂದರೆ ಜನರ ಸ್ಮರಣ ಶಕ್ತಿ ಅಷ್ಟೊಂದು ಕ್ಷೀಣವಾದುದೇನಲ್ಲ.

ಕೆಲವು ಉದಾಹರಣೆಗಳನ್ನು ನಾನಿಲ್ಲಿ ಪರಿಶೀಲಿಸ ಬಯಸುತ್ತೇನೆ. ವಿರೋಧ ಪಕ್ಷಗಳ "ಗೂಢ ಸಭೆಗಳು ಕಳೆದ ಐದು ವರ್ಷಗಳಲ್ಲಿ, ಮೊದಲು ಅಸ್ಸಾಂನಲ್ಲಿ, ಈಗ ಜಮ್ಮು—ಕಾಶ್ಮೀರ ಹಾಗೂ ಪಂಜಾಬಿನಲ್ಲಿ ನಕಾರಾತ್ಮಕ ಪಾತ್ರ ವಹಿಸಿ ರಾಷ್ಟ್ರ—ವಿರೋಧೀ ಶಕ್ತಿಗಳಿಗೆ ದೇಶವನ್ನು ದುರ್ಬಲಗೊಳಿಸಲು ನೆರವಾಗಿವೆ" ಎಂದಿದ್ದೀರಿ ಡೆಹ್ರಾಡೂನಿನಲ್ಲಿ.

ದಿಲ್ಲಿ ನಿರ್ಣಯ

ಬಹುಶಃ ಜೂನ್ 1983 ರಿಂದ ಜನವರಿ 1984 ರ ನಡುವೆ ನಡೆದ ಮೂರು ಬಿ. ಜೆ. ಪಿ. ಯೇತರ ವಿರೋಧ ಪಕ್ಷಗಳ ಸಮ್ಮೇಳನಗಳ ಬಗ್ಗೆ ಸರಿಯಾದ ವಿಚಾರ ನಿಮಗೆ ತಿಳಿಸಿಲ್ಲ. ಸಮ್ಮೇಳನಗಳ ದಸ್ತಾವೇಜುಗಳನ್ನು ಬಹುಶಃ ನೀವು ಓದಿಲ್ಲವಾದ್ದರಿಂದ ಅಲ್ಲಿ ರೂಪಿತಗೊಂಡ ಒಮ್ಮತದ ಬಗ್ಗೆ ನಿಮ್ಮ ಗಮನ ಸೆಳೆಯ ಬಯಸುತ್ತೇನೆ.

ದಿಲ್ಲಿ ಸಮ್ಮೇಳನ ನಡೆದದ್ದು ಪಂಜಾಬ್ ಪರಿಸ್ಥಿತಿಯನ್ನು ಚರ್ಚಿಸಲಿಕ್ಕಾಗಿಯೇ. ಅಲ್ಲಿ ಅಂಗೀಕರಿಸಲಾದ ನಿರ್ಣಯ ಈ ಸಮಸ್ಯೆಯ ಪರಿಹಾರಕ್ಕೆ ತನ್ಮೂಲಕ ನಂತರದ ದುರಂತಕಾರೀ ಘಟನೆಗಳನ್ನು ತಡೆಯಲು ಆಧಾರವಾಗಬಹುದಾಗಿತ್ತು. ಆದರೆ ಸರಕಾರ ಗಮನ ಕೊಡಲಿಲ್ಲ. ಸೈನಿಕ ಕಾರ್ಯಾಚರಣೆಯ ಮುನ್ನ 1984 ರ ಜೂನ್ 2 ರಂದು ಇಂದಿರಾ ಗಾಂಧಿಯವರು ತನ್ನ ರೇಡಿಯೋ ಭಾಷಣದಲ್ಲಿ ತಳೆದದ್ದು ವಿರೋಧ ಪಕ್ಷಗಳು ದಿಲ್ಲಿಯಲ್ಲಿ 1983 ರ ಜೂನ್‌ನಲ್ಲಿ ತಳೆದ ನಿಲುವನ್ನೇ ಎಂಬುದನ್ನು ನೀವು ಗಮನಿಸಬೇಕು. ಆ ಹೇಳಿಕೆಯಲ್ಲಿ ಪ್ರತ್ಯೇಕತಾವಾದಿಗಳನ್ನು ಹಾಗೂ ಉಗ್ರವಾದಿಗಳನ್ನು ಬೆಂಬಲಿಸುವ ಒಂದಾದರೂ ವಾಕ್ಯವನ್ನು ನೀವು ತೋರಿಸ ಬಲ್ಲಿರಾ ?

ಭಯಗ್ರಸ್ಥ ಆಪಾದನೆ

ಶ್ರೀನಗರ ಸಮ್ಮೇಳನವನ್ನು ಕೇಂದ್ರ—ರಾಜ್ಯ ಸಂಬಂಧಗಳ ಬಗ್ಗೆ ಚರ್ಚಿಸಲು ಸಾರ್ವಜನಿಕಾಭಿಪ್ರಾಯದ ಒತ್ತಡದಿಂದ ಕೇಂದ್ರ ಸರಕಾರ ಸರ್ಕಾರಿಯಾ ಆಯೋಗವನ್ನು ನೇಮಿಸಿದ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು. ಆ ಸಮ್ಮೇಳನದ ನಿರ್ಣಯ ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಅಧಿಕಾರಗಳ ಕೇಂದ್ರೀಕರಣದಿಂದಾಗಿ ಉಂಟಾಗುತ್ತಿರುವ ಅಪಾಯದ ಬಗ್ಗೆ ಹೇಳುತ್ತ ನಿಮ್ಮ ಪಕ್ಷ ಕಾರ್ಯಾಂಗದ ಮೇಲೆ ಸಂಸತ್ತಿಗಿರುವ ಕಡಿವಾಣಗಳ ಬಗ್ಗೆಯೂ ಭಯಗೊಂಡಿದೆ. ಈ ಅಪಾಯದಿಂದಲೇ ನೀವು ವಿರೋಧ ಪಕ್ಷಗಳ ಮೇಲೆ ಆಪಾದನೆ ಹೊರಿಸುತ್ತಿರುವುದು. ರಾಜ್ಯಗಳನ್ನು ಶಕ್ತಿಯುತಗೊಳಿಸುವ ಮೂಲಕವಷ್ಟೇ ದೇಶದ ಐಕ್ಯತೆಯನ್ನು ಬಲಗೊಳಿಸಬಹುದೇ ವಿನಃ ಕೇಂದ್ರದಲ್ಲಿ ಎಲ್ಲಾ ಅಧಿಕಾರಗಳನ್ನು ಒಟ್ಟು ಸೇರಿಸುವುದರಿಂದ ಅಲ್ಲ ಎಂಬುದನ್ನು ಮೂರು ದಶಕಕ್ಕೂ ಮೀರಿದ ಕಾಂಗ್ರೆಸ್ ಆಳ್ವಿಕೆಯ ಇತಿಹಾಸ ತೋರಿಸುತ್ತದೆ.

ಹರ್‌ಕಿಶನ್ ಸಿಂಗ್ ಸುರ್ಜೀತ್

ಬಲಶಾಲೀ ರಾಜ್ಯಗಳನ್ನು ಆಧರಿತವಾದ ಒಂದು ಶಕ್ತಿಶಾಲೀ ಭಾರತವನ್ನು ಕಟ್ಟುವುದಕ್ಕಾಗಿ ಕೇಂದ್ರ—ರಾಜ್ಯ ಸಂಬಂಧಗಳನ್ನು ಹೇಗೆ ಪುನರ್ರಚಿಸಬೇಕು ಎನ್ನುವುದಕ್ಕೆ ಹಲವು ಸಲಹೆಗಳನ್ನು ಮುಂದಿಟ್ಟಿತು. ಈ ಬಗ್ಗೆ ಚರ್ಚೆ ಆರಂಭಿಸಲು ನಿಮಗೆ ಪೂರ್ಣ ಹಕ್ಕು ಇದೆ. ಆದರೆ ಅದರ ಮೊದಲು ವಿರೋಧ ಪಕ್ಷಗಳು ಅಂಗೀಕರಿಸಿದ ನಿರ್ಣಯಗಳನ್ನು ಪೂರ್ಣವಾಗಿ ನೀವು ಓದಲೇ ಬೇಕಾಗುತ್ತದೆ. ನಿಮ್ಮ ಕೋಪವನ್ನು ಅರ್ಥ ಮಾಡಿಕೊಳ್ಳಬಹುದು. ಯಾಕೆಂದರೆ ಸರ್ಕಾರಿಯಾ ಆಯೋಗ ನೇಮಿಸಲೇಬೇಕಾಗಿ ಬಂದಾಗ ಕೇಂದ್ರ ಸರಕಾರ ಕೆಲವು ಮಂತ್ರಿಗಳ ಮೂಲಕ ಅಧ್ಯಕ್ಷೀಯ ಮಾದರಿಯ ಬಗ್ಗೆ ಪ್ರಚಾರ ಆರಂಭಿಸಿತು. ಬಹುಶಃ

ಖಿನ್ನರಾಗುವುದು ಸ್ವಾಭಾವಿಕ

ನೀವು ಜನವರಿ 1984 ರಲ್ಲಿ ಕಲಕತ್ತೆಯಲ್ಲಿ ನಡೆದ ಸಮ್ಮೇಳನದಿಂದ ಖಿನ್ನರಾದಂತಿದೆ. ಇದು ಮೂರು ವಿಷಯಗಳನ್ನು ಚರ್ಚಿಸಿತು. ಈ ಸಮ್ಮೇಳನದ ಆರ್ಥಿಕ ನಿರ್ಣಯ ಸ್ವಾಭಾವಿಕವಾಗಿಯೇ ದೇಶವನ್ನು ಗಂಭೀರ ಬಿಕ್ಕಟ್ಟಿನಲ್ಲಿ ತಂದಿರಿಸಿದ ಕಾಂಗ್ರೆಸ್ (ಐ) ನ ಧೋರಣೆಗಳನ್ನು ಕಟುವಾಗಿ ಟೀಕಿಸಿತು. ಪರ್ಯಾಯವಾಗಿ ಅದು ಹನ್ನೊಂದು ಅಂಶಗಳ ಬೇಡಿಕೆಗಳನ್ನು ಮುಂದಿಟ್ಟಿತು. ಈ ಬೇಡಿಕೆಗಳಲ್ಲಿ ಯಾವುದು ರಾಷ್ಟ್ರ ವಿರೋಧಿ ಎಂದು ನೀವು ತೋರಿಸಿ ಕೊಡಬಲ್ಲಿರಾ ? ಚುನಾವಣೆಗಳ ಸಂದರ್ಭದಲ್ಲಿ ಈ ಎಲ್ಲಾ ಬೇಡಿಕೆಗಳ ಬಗ್ಗೆ ನೀವು ಭರವಸೆ ನೀಡಬಹುದು – ಆದರೆ ಅದನ್ನು ನಂತರ ಜ್ಯಾರಿಗೊಳಿಸುವ ಬಗ್ಗೆ ಗಂಭೀರ ಗಮನ ನೀಡದೆ, ಕಾಂಗ್ರೆಸ್ (ಐ) ನ ಸದ್ಯದ ಚುನಾವಣಾ ಪ್ರಣಾಳಿಕೆಯಲ್ಲಿ ಭೂ ಸುಧಾರಣೆಗಳ ಬಗ್ಗೆ ಏನೂ ಹೇಳದೆ ಭೂಮಾಲಕ-ಪರ ನಿಲುವು ತಳೆದಿರುವಾಗ ಕೃಷಿ ಕಾರ್ಮಿಕರು, ರೈತರು, ಕಾರ್ಮಿಕ ವರ್ಗ ಹಾಗೂ ಇತರ ದಲಿತ ಜನತೆಯ ಬೇಡಿಕೆಗಳ ಬಗ್ಗೆ ನಿಮಗೆ ಸಂತೋಷವಾಗಲು ಸಾಧ್ಯವಿಲ್ಲ.

ಕಾಂಗ್ರೆಯೇತರ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುವುದರ ಮೇಲಿನ ಎರಡನೇ ನಿರ್ಣಯದ ಸತ್ಯತೆ ಅಮೇಲಿನ ಘಟನೆಗಳಿಂದ ಸಾಬೀತಾಯಿತು. ಡಾ. ಫರೂಕ್ ಅಬ್ದುಲ್ಲಾರ ಸರ್ಕಾರವನ್ನು ಉರುಳಿಸಲು ಅಪಪ್ರಚಾರಗಳಿಂದ ಸಾಧ್ಯವಾಗದಾದಾಗ ಪಕ್ಷಾಂತರಗಳನ್ನು ನಿಮ್ಮ ಪಕ್ಷ ನಡೆಸಿ ಕೇಂದ್ರ ಸರ್ಕಾರ ಜಮ್ಮು—ಕಾಶ್ಮೀರ ಜನತೆಯ ತೀರ್ಪನ್ನು ನಿರ್ಲಕ್ಷಿಸಲು ಹಠ ತೊಟ್ಟಿದೆ ಎಂದು ಅಲ್ಲಿಯ ಜನತೆಗೆ ಸ್ಪಷ್ಟವಾಗಿ ತೋರಿಸಿ ಕೊಟ್ಟಿತು. ನಿಮ್ಮ ಪಕ್ಷದ ಸರ್ಕಾರದ ಈ ಕ್ರಮದಿಂದಾಗಿ ಪ್ರೋತ್ಸಾಹ ದೊರಕಿದ್ದು ಪ್ರತ್ಯೇಕತಾವಾದೀ ಶಕ್ತಿಗಳಿಗೆ ಎಂಬುದನ್ನು ಈಗಲ್ಲವಾದರೂ, ಇನ್ನೂ ಕೆಲವು ವರ್ಷಗಳ ನಂತರವಾದರೂ ನೀವು ಅರಿತುಕೊಳ್ಳಲೇ ಬೇಕಾಗಿ ಬರುತ್ತದೆ.

[6ನೇ ಪುಟ ನೋಡಿ]

ನಿಸ್ಟ್—ವಿರೋಧೀ ಗಂಗವಾಗಿದ್ದರೆ, ಪಂಜಾಬ್‌ನಲ್ಲಿ ವಿರೋಧ ಪಕ್ಷಗಳತ್ತ ಆಕೆಯ ದ್ವೇಷ. ಭಿಂದ್ರನ್ ವಾಲೆಯ ರೂಪದಲ್ಲಿ ತನ್ನ ಕರ್ತೃವನ್ನೇ ನುಂಗಿ ಹಾಕುವ ಒಂದು ಪೆಡಂಭೂತದ ಸೃಷ್ಟಿಯ ಸ್ವರೂಪ ತಳೆಯಿತು.

ಆಧ್ಯಾತ್ಮಿಕ ಮುಖಂಡ !

ಸ್ವರ್ಣ ಮಂದಿರದಲ್ಲಿ ಸೈನಿಕ ಕಾರ್ಯಾಚರಣೆಯ ತುಸು ಮುನ್ನವಷ್ಟೇ ನೀವೇ ಸ್ವತಃ ಭಿಂದ್ರನ್ ವಾಲೆಯನ್ನು "ರಾಜಕೀಯ ಆಕಾಂಕ್ಷೆಗಳಿಲ್ಲದ ಆಧ್ಯಾತ್ಮಿಕ ಮುಖಂಡ" ಎಂದು ವರ್ಣಿಸಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಆ "ಆಧ್ಯಾತ್ಮಿಕ ಮುಖಂಡ" ನನ್ನು ಎದುರಿಸಲು ಸೇನೆ ಸ್ವರ್ಣ ಮಂದಿರವನ್ನು ಪ್ರವೇಶಿಸಬೇಕಾಯಿತು. ಆ ಇಬ್ಬರು ಸಿಖ್ಖ್ ಪೋಲೀಸರು ಪ್ರಧಾನ ಮಂತ್ರಿಗಳನ್ನು ಕೊಲೆ ಮಾಡುವ ಕೃತ್ಯ ಕೈಗೊಂಡದ್ದು ಆ ಸೈನಿಕ ಕಾರ್ಯಾಚರಣೆಗೆ ಒಂದು ಪ್ರತೀಕಾರವಾಗಿ.

ಆದರೆ ಕೋಮುವಾದದ ಹಾವು ವಿಷ ಕಾರುವುದನ್ನು ಈ ಘಟನೆಯೊಂದಿಗೆ ನಿಲ್ಲಿಸಲಿಲ್ಲ. ದಿಲ್ಲಿಯೂ ಸೇರಿದಂತೆ ಹಲವೆಡೆ ನಡೆದ ಸಿಖ್ಖ್—ವಿರೋಧೀ ಗಲಭೆಗಳು ಇದಕ್ಕೆ ಸಾಕ್ಷಿ. ನೀವು ಸ್ಥಿತಿಯ ಗಂಭೀರತೆಯನ್ನು ಅರಿತುಕೊಳ್ಳುವಲ್ಲಿ ವಿಫಲರಾದಿರಿ ಎಂದು ಬೇಸರದಿಂದ ಹೇಳಬೇಕಾಗಿದೆ. ನೀವು ವಿರೋಧ ಪಕ್ಷಗಳ ಮುಖಂಡರು –ನಾನೂ ಸೇರಿದಂತೆ–ನಿಮ್ಮ ಗಮನಕ್ಕೆ ತಂದ ವಾಸ್ತವ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಿ, ಅಪರಾಧಿಗಳನ್ನು ಶಿಕ್ಷಿಸುವ ಬದಲು ಈಗ ವಿರೋಧ ಪಕ್ಷಗಳ ಮೇಲೆ ಆಪಾದನೆ ಹೊರಿಸುತ್ತಿದ್ದೀರಿ. ವಿರೋಧ ಪಕ್ಷಗಳು ಆನಂದಪುರ್ ಸಾಹೀಬ್ ನಿರ್ಣಯವನ್ನು ಅನುಮೋದಿಸಿದವು ಎಂಬ ಇತ್ತೀಚಿನ ಆಪಾದನೆ ನಿಮ್ಮ ಸುಳ್ಳು ಪ್ರಚಾರದ ತುತ್ತತುದಿ.

ಅಪಾಯಕಾರೀ ಕ್ರಮಗಳು

ನೀವು ಅಧಿಕಾರ ವಹಿಸಿ ಕೇವಲ ಏಳು ವಾರಗಳಾಗಿವೆಯಷ್ಟೆ. ಈ ಅಲ್ಪಾವಧಿಯಲ್ಲೂ ಸಿಖ್–ವಿರೋಧೀ ಗಲಭೆಗಳ ಬಗ್ಗೆ ನೀವು ತಳೆದ ಧೋರಣೆ ದೇಶದ ಸಮಗ್ರತೆಗೆ ಕೆಡುಕುಂಟು ಮಾಡುವಂತಹದು. ಎಂದು ಹೇಳಲೇ ಬೇಕಾಗಿದೆ.

ಭೂಪಾಲದ ದುರಂತ ನಡೆದದ್ದು ನೀವು ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ. ಆ ಭಯಾನಕ ದುರಂತಕ್ಕೆ ಸಂಪೂರ್ಣ ಹೊಣೆ ಬಹುರಾಷ್ಟ್ರೀಯ ಗುತ್ತೇದಾರಿ ಕಂಪೆನಿಯಾದ ಯೂನಿಯನ್ ಕಾರ್ಬೈಡ್‌ನದ್ದು ಎಂಬುದರಲ್ಲಿ ಏನೇನೂ ಸಂದೇಹವಿಲ್ಲ. ನಿಮ್ಮ ನೇತೃತ್ವದ ಕೇಂದ್ರ ಸರಕಾರ ಹಾಗೂ ಮಧ್ಯಪ್ರದೇಶದ ಸರಕಾರ ಅದರ ವಿರುದ್ಧ ಕ್ರಮ ಕೈಗೊಂಡಿದ್ದರೆ ಅದನ್ನು ಬೆಂಬಲಿಸಲು ನಮ್ಮ ಪಕ್ಷ ಮುಂದೆ ಬರುತ್ತಿತ್ತು. ಆದರೆ ಆ ಕಂಪೆನಿಯ ಅಧ್ಯಕ್ಷನನ್ನು ಅಗ್ಗದ ಚಪ್ಪಾಳೆ ಗಿಟ್ಟಸಲು ಮೊದಲು ಬಂಧಿಸಿ ಆಮೇಲೆ ಆತನೊಂದಿಗೆ ಒಂದು ರಾಜೀ ಒಪ್ಪಂದಕ್ಕೆ ಬಂದಿರುವುದು ನಿಮ್ಮ ಮಟ್ಟಿಗೆ ನಾಚಿಕೆಗೇಡಿನ ವಿಷಯ ಇದು ಒಂದೆಡೆ ಜನತೆಯ ಕಣ್ಣಿಗೆ ಮಣ್ಣೆರಚಿ, ಇನ್ನೊಂದೆಡೆ ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ದೋಸ್ತಿ ಮಾಡಿಕೊಳ್ಳುವ ಈ ಹಿಂದಿನ ಧೋರಣೆಯ ಮುಂದುವರಿಕೆಯೆಂದೇ ನಾವು ಪರಿಗಣಿಸುತ್ತೇವೆ.

ಈ ದ್ವಿವಿಧ ಧೋರಣೆಯ ಮೊದಲಿನ ಆ ವೃತ್ತಿಯೆಂದರೆ "ಆಧ್ಯಾತ್ಮಿಕ ಮುಖಂಡ" ಭಿಂದ್ರನ್‌ವಾಲೆಯ ಬಂಧನ ಹಾಗೂ ಆ ಮೇಲೆ ಆತನ ಬಿಡುಗಡೆ. ಅಂತಿಮವಾಗಿ ಅದು ಎಲ್ಲಿಗೆ ಕೊಂಡೊಯ್ಯಿತು ಎಂದು ತಿಳಿದ ಜನ ನಿಮ್ಮ ಇತ್ತೀಚಿನ ಈ ಕ್ರಮದಿಂದ ವ್ಯಾಕುಲಗೊಂಡಿದ್ದಾರೆ.

ಎರಡು ಪ್ರಶ್ನೆಗಳು

ನಾನು ಎರಡು ಪ್ರಶ್ನೆಗಳನ್ನು ಕೇಳ ಬಯಸುತ್ತೇನೆ. ಒಂದು : ಯಾವುದೇ ಕಾರಣಕ್ಕೆ ನಿಮ್ಮ ಪಕ್ಷ ಈ ಚುನಾವಣೆಗಳಲ್ಲಿ ಗೆದ್ದರೆ ನೀವು ಆಡಳಿತವನ್ನು ಹೇಗೆ ನಡೆಸಿಕೊಂಡು ಹೋಗುತ್ತೀರಿ ವಿರೋಧ ಪಕ್ಷಗಳನ್ನು ಶತ್ರುಗಳೆಂದು ಪರಿಗಣಿಸಿ ತನ್ಮೂಲಕ ಅವುಗಳ ಸಂಪೂರ್ಣ ನಿರ್ಮೂಲನದ ಉದ್ದೇಶ ವಿಟ್ಟುಕೊಂಡಿದ್ದ ನಿಮ್ಮ ತಾಯಿಯ ಹೆಜ್ಜೆಗಳನ್ನು ಅನುಸರಿಸಬೇಕೆಂದಿದ್ದೀರಾ ? [ನಿಮ್ಮ ಇತ್ತೀಚಿನ ಹೇಳಿಕೆಗಳು ಹಾಗೂ ಭಾಷಣಗಳು ಇದನ್ನೇ ಸೂಚಿಸುತ್ತಿವೆ] ಅಥವಾ ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಒಮ್ಮತಾಭಿಪ್ರಾಯದ ಮೂಲಕ ಪರಿಹರಿಸಲು ಸಾಧ್ಯ ಎಂಬುದನ್ನು ಅರಿತುಕೊಂಡು ವಿರೋಧ ಪಕ್ಷಗಳೊಂದಿಗೆ ಸಹಕರಿಸಲು ಪ್ರಯತ್ನಿಸುತ್ತೀರಾ ?

ಎರಡು : ಯಾವುದೇ ಕಾರಣದಿಂದಾಗಿ ನಿಮ್ಮ ಪಕ್ಷ ಬಹುಮತಗಳಿಸುವುದರಲ್ಲಿ ವಿಫಲವಾದರೆ ನೀವು ತಾಳ್ಮೆಯಿಂದ ಗಾಳಿಯ ದಿಕ್ಕು ಬದಲಾಗುವುದನ್ನು ಕಾಯುತ್ತಾ ವಿರೋಧ ಪಕ್ಷವಾಗಿ ಕೂರುತ್ತೀರಾ ? ಅಥವಾ ಕಾಂಗ್ರೆಸ್ ಪಕ್ಷ ಕೇರಳದ "ವಿಮೋಚನಾ ಸಮರ" ವನ್ನು, ಕರ್ನಾಟಕದ ಮ್ಯೂಲಿ ಟೀವು ಪ್ರಕರಣಗಳನ್ನು ಹಾಗೂ ಕಾಶ್ಮೀರ–ಆಂಧ್ರಗಳ ಉರುಳಿಸುವ ಆಟಗಳನ್ನು ಪುನರಾವರ್ತನೆ ಗೊಳಿಸುತ್ತೀರಾ ?

ಈ ಪ್ರಶ್ನೆಗಳಿಗೆ ನಿಮ್ಮ ಉತ್ತರ ನಿಮ್ಮ ಭವಿಷ್ಯವನ್ನು, ನಿಮ್ಮ ಪಕ್ಷದ ಭವಿಷ್ಯವನ್ನು ಹಾಗೂ ದೇಶದ ಭವಿಷ್ಯವನ್ನು ನಿರ್ಧರಿಸಲಿವೆ."

○

(3ನೇ ಪುಟದಿಂದ)

ಕೋಷ್ಟಕ 7 : ಕೌಟುಂಬಿಕ ಆದಾಯದ ಶೇಕಡಾ ಪಾಲು (1975–76)

ದೇಶದ ಒಟ್ಟು ಕುಟುಂಬಗಳಲ್ಲಿ	ದೇಶದ ಒಟ್ಟು ಕೌಟುಂಬಿಕ ಆದಾಯದಲ್ಲಿ	
ಕೆಳಮಟ್ಟದ ಶೇ 20 ರಷ್ಟು ಕುಟುಂಬಗಳ ಆದಾಯ	ಶೇ 7.0	
ಕೆಳಮಟ್ಟದ ಶೇ 21 ರಿಂದ 40 ರಷ್ಟು ಕುಟುಂಬಗಳ ಆದಾಯ	ಶೇ 9.2	ಶೇ 16.2
ಕೆಳಮಟ್ಟದ ಶೇ 41 ರಿಂದ 60 ರಷ್ಟು ಕುಟುಂಬಗಳ ಆದಾಯ	ಶೇ. 13.9	ಶೇ 30.1
ಕೆಳಮಟ್ಟದ ಶೇ. 61 ರಿಂದ 80 ರಷ್ಟು ಕುಟುಂಬಗಳ ಆದಾಯ	ಶೇ. 20.5	ಶೇ. 50.6
ಮೇಲ್ಮಟ್ಟದ ಶೇ. 81 ರಿಂದ 100 ರಷ್ಟು ಕುಟುಂಬಗಳ ಆದಾಯ	ಶೇ. 49.4	ಶೇ. 100.0
ಮೇಲ್ಮಟ್ಟದ ಶೇ. 10 ರಷ್ಟು ಕುಟುಂಬಗಳ ಆದಾಯ	ಶೇ. 33.0	

ಕೋಷ್ಟಕ 8 : ತೆರಿಗೆ ಆದಾಯದ ಪ್ರಮಾಣ (ಶೇಕಡಾಂಶ)

	1953–55	1966–68	1980–82	1982–83 (ಪರಿಷ್ಕೃತ)	1983–84 (ಮುಂಗಡ ಪತ್ರ ನಿರೀಕ್ಷೆ)
ರಾಷ್ಟ್ರೀಯ ಆದಾಯದಲ್ಲಿ ತೆರಿಗೆ ಆದಾಯದ ಶೇಕಡಾಂಶ	6.3	11.6	19.3	20.5	—
ಒಟ್ಟು ತೆರಿಗೆ ಆದಾಯದಲ್ಲಿ ಅಪ್ರತ್ಯಕ್ಷ ತೆರಿಗೆಯ ಶೇಕಡಾಂಶ	58.8	70.7	83.2	83.3	85.0
ರಾಷ್ಟ್ರೀಯ ಆದಾಯದಲ್ಲಿ ಅಪ್ರತ್ಯಕ್ಷ ತೆರಿಗೆಯ ಶೇಕಡಾಂಶ	3.7	8.2	16.1	17.1	—

ಕೋಷ್ಟಕ 9 : ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ

ವರ್ಷ	ಸಗಟು ಮಾರುಕಟ್ಟೆಯ ಬೆಲೆ ಸೂಚಿ	ವರ್ಷ	ಕೈಗಾರಿಕಾ ಕಾರ್ಮಿಕ ಗ್ರಾಹಕರ ಬೆಲೆ ಸೂಚಿ
1952.53	100.0	1949	100.0
1960.61	134.0	1960.61	126.00
1970.71	243.2	1970.71	230.0
1980.81	625.8	1980.81	536.0
ಅಕ್ಟೋಬರ್ ∠7,1984	833.0	ಸೆಪ್ಟಂಬರ್,1984	716.0

ಸಗಟು ಮಾರುಕಟ್ಟೆಯ ಬೆಲೆ ಸೂಚಿಯ ವಾರ್ಷಿಕ ಏರಿಕೆಯ ದರ (ಶೇಕಡಾ)

1952.53 ರಿಂದ 1960.61 : 3.7 ./.
1960.61 ರಿಂದ 1970.71 : 6.1 ./.
1970.71 ರಿಂದ 1980.81 : 9.9 ./.
1980.81 ರಿಂದ 1983.84 : 7.0 ./.

ಟಿಪ್ಪಣಿ : ವಿವಿಧ ಮೂಲ ವರ್ಷ ಆಧರಿತ ಸಗಟು ಬೆಲೆ ಸೂಚಿಗಳನ್ನು ಒಂದೇ ಶ್ರೇಣಿಯಲ್ಲಿ ಹೊಂದಿಸಲಾಗಿದೆ.

ಕೋಷ್ಟಕ 10 : ಭಾರತ ಸರಕಾರದ ಮುಂಗಡ ಪತ್ರದಲ್ಲಿನ ಕೊರತೆ ಹಣ (ರೂ. ಕೋಟಿಗಳಲ್ಲಿ)

ವರ್ಷ	ಪಂಚವಾರ್ಷಿಕ ಅವಧಿಯಲ್ಲಿ ಕೊರತೆ ಹಣದ ವಾರ್ಷಿಕ ಸರಾಸರಿ
1947.52	44.56
1952.57	94.99
1957.62	169.54
1962.67	192.58
1967.72	263.26
1972.77	547.20
1977.52	1769.60
1982.83	3399.00
1983.84 (ಪರಿಷ್ಕೃತ ಅಂದಾಜು)	2095.00
1984.85 (")	1762.00

ರಾಜೀವ್ ಗಾಂಧಿಗೆ ಬಹಿರಂಗ ಪತ್ರ

(5ನೇ ಪುಟದಿಂದ)

ಪ್ರಜಾಪ್ರಭುತ್ವದ ರಕ್ಷಣೆ ರಾಷ್ಟ್ರವಿರೋಧಿಯೇ ?

ಕಳೆದ ಆಗಸ್ಟ್‌ನಲ್ಲಿ ಆಂಧ್ರದಲ್ಲಿ ಕೇಂದ್ರ ಸರ್ಕಾರ ಮಾಡಿದ ಕೃತ್ಯ ಕೇಂದ್ರದ ಕಾರ್ಯನಿರ್ವಹಣೆಯ ಮೇಲೆ ಒಂದು ಕರಾಳ ಗುರುತಾಗಿಯೇ ಉಳಿಯಲಿದೆ. ರಾಮರಾವ್ ಸರ್ಕಾರ ಮತ್ತೆ ಅಧಿಕಾರ ನಡೆಸಲು ಸಾಧ್ಯವಾದದ್ದು ಆಂಧ್ರಪ್ರದೇಶ ಮಾತ್ರವಲ್ಲ ಸಮಸ್ತ ದೇಶದಜನತೆಯ ಜಾಗರೂಕತೆಯಿಂದಾಗಿ. ಈ ಪ್ರಜ್ಞೆ ತುರ್ತು ಪರಿಸ್ಥಿತಿಯ ದಿನಗಳ ಸರ್ವಾಧಿಕಾರೀ ಆಳ್ವಿಕೆಯ ವಿರುದ್ಧ ಹೋರಾಟದಲ್ಲಿ ನಿರ್ಮಾಣಗೊಂಡಿತ್ತು. ಪ್ರಜಾಪ್ರಭುತ್ವದರಕ್ಷಣೆಗಾಗಿ ಜನತೆಯ ಈ ಕ್ರಮವನ್ನು ನೀವು ರಾಷ್ಟ್ರ ವಿರೋಧಿ ಎನ್ನುತ್ತೀರಾ ?

ಕಲಕ್ಕತ್ತಾ ಸಮ್ಮೇಳನದ ಮೂರನೇ ನಿರ್ಣಯ ಪಂಜಾಬ್ ಪರಿಸ್ಥಿತಿ ಕುರಿತಾದದ್ದು. ಒಂದೇಭಾಷೆಯ ಸಂಸ್ಕೃತಿಯ ಜನತೆಯಲ್ಲಿ ಕೋಮು ಆಧಾರಿತ ಪರಕೀಯತೆ ಪಂಜಾಬ್ ರಾಜ್ಯಕ್ಕೆ ಹಾಗೂ ದೇಶಕ್ಕೆ ಅಪಾಯಕಾರಿ ಎಂದು ಹೇಳಿದ ಆ ನಿರ್ಣಯ ದೆಹಲೀ ನಿರ್ಣಯವನ್ನು ಪುನರುಚ್ಚರಿಸಿತು. ಅಮಾಯಕ ಜನತೆಯ ಕೋಮು ಕಗ್ಗೊಲೆಗಳನ್ನು ಹಾಗೂ ಹಿಂಸಾಚಾರವನ್ನು ಎಲ್ಲಾ ಪಕ್ಷಗಳು ಖಂಡಿಸಬೇಕು ಹಾಗೂ ಪೂಜಾ ಸ್ಥಾನಗಳ ಪಾವಿತ್ರ್ಯವನ್ನು ಗೌರವಿಸಿ ಇಂತಹ ಸ್ಥಳಗಳನ್ನು ಅಪವಿತ್ರಗೊಳಿಸುವುದನ್ನು, ಇಲ್ಲಿ ಕೊಲೆಗಾರರಿಗೆ ಆಶ್ರಯ ನೀಡುವುದನ್ನು ಖಂಡಿಸಬೇಕು. ಎಂದು ಆ ನಿಣಯ ಕರೆ ನೀಡಿತು. ಅಲ್ಲದೆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ತ್ರಿಪಕ್ಷೀಯ ಮಾತುಕತೆಗಳನ್ನು ಮತ್ತೆ ಏರ್ಪಡಿಸಬೇಕೆಂದು ಆ ನಿರ್ಣಯ ಒತ್ತಾಯಿಸಿತು. ಪಂಜಾಬೀ ಜನತೆಯ ಪ್ರಜಾಪ್ರಭುತ್ವ ಬೇಡಿಕೆಗಳಿಗೆ ಕೂಡಾ ಪರಿಹಾರ ಒದಗಿಸಬಾರದೆಂದು ನೀವು ದೃಢ ನಿರ್ಧಾರ ಮಾಡಿದ್ದರೆ ಮಾತ್ರ ಈ ನಿರ್ಣಯಗಳು ಪ್ರತ್ಯೇಕತಾವಾದಿಗಳಿಗೆ ಬೆಂಬಲ ಕೊಟ್ಟವೆ ಎಂದು ನೀವು ಹೇಳಬಹುದು.

ಉಗ್ರಗಾಮಿಗಳಿಗೆ ಕುಮ್ಮಕ್ಕು ನೀಡಿದವರಾರು?

ಪಂಜಾಬ್ ಪರಿಸ್ಥಿತಿ ಬಗ್ಗೆ ಪಕ್ಷದ ದಸ್ತಾವೇಜುಗಳನ್ನೆಲ್ಲಾಸಂಕಲಿಸಿದಒಂದು ಪುಸ್ತಕವನ್ನು ನಮ್ಮ ಪಕ್ಷ ಪ್ರಕಟಿಸಿದೆ. ಅದರಲ್ಲಿ ಸೆಪ್ಟಂಬರ್ 1981 ರಿಂದ 1984 ರ ನಡುವೆ ಪ್ರಧಾನ ಮಂತ್ರಿಗಳಿಗೆ ನಾನು ಬರೆದ ಪತ್ರಗಳು, ಸಂಸತ್ತಿನಲ್ಲಿ ನಾನು ಹಾಗೂ ನನ್ನ ಪಕ್ಷದ ಇತರರು ಮಾಡಿದ ಭಾಷಣಗಳೆಲ್ಲಾ ಇವೆ. ಅಕಾಲಿಗಳ ಆಂದೋಲನದ ಬಗ್ಗೆ ನಮ್ಮ ಪಕ್ಷದ ನಿಲುವನ್ನು ಟೀಕಿಸುವ ಮೊದಲು ಈ ಪುಸ್ತಕವನ್ನು ಆಮೂಲಾಗ್ರವಾಗಿ ಓದಿ ಕೊಳ್ಳಲು ದಯವಿಟ್ಟು ಯಾರಿಗಾದರೂ ತಿಳಿಸಿ 1982 ರ ಆಗಸ್ಟ್ 10 ರಂದು ಸಂತ್ ಲೋಂಗೋವಾಲರಿಗೆ ಬರೆದ ಬಹಿರಂಗ ಪತ್ರದಲ್ಲಿ ಆನಂದ್‌ಪುರ್ ಸಾಹೀಬ್ ನಿರ್ಣಯ "ಪಂಜಾಬಿನ ಸಿಖ್ ಮತ್ತು ಇತರ ಕೋಮುಗಳ ನಡುವೆ ವೈಮನಸ್ಯ ಬೆಳೆಸ ಬಯಸುವವರಿಗೆ ದೊರೆತ ವಿಜಯ" ಎಂದು ಹೇಳಿದ್ದೆ. ದೇಶದ ಹೆಚ್ಚಿನ ದಿನಪತ್ರಿಕೆಗಳಲ್ಲಿ ಇದು ಪ್ರಕಟಗೊಂಡಿತ್ತು. ನಂತರದ ಭಾಷಣಗಳಲ್ಲೆಲ್ಲಾ ಇದನ್ನು ಪುನರುಚ್ಚರಿಸಲಾಯಿತು. ಹೀಗಿದ್ದರೂ ಸಿ. ಪಿ. ಐ. (ಎಂ) ಆನಂದ್‌ಪುರ್ ಸಾಹೀಬ್ ನಿರ್ಣಯವನ್ನು ಬೆಂಬಲಿಸುತ್ತಾ ಬಂದಿದೆ ಎಂದು ನೀವು ಹೇಗೆ ಹೇಳಲು ಸಾಧ್ಯ ?

ಸಿ. ಪಿ. ಐ. (ಎಂ) ಅಕಾಲಿಗಳ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಎನ್ನುತ್ತಿದೆ. ಎಂದು ನೀವು ಹೇಳಿರುವುದಾಗಿ ವರದಿಯಾಗಿದೆ. ಇದಕ್ಕೆ ಪುರಾವೆಯಾಗಿ ಸಿ. ಪಿ. ಐ. (ಎಂ)ನ ಒಂದಾದರೂ ಹೇಳಿಕೆಯನ್ನು ಉದಾಹರಿಸಲು ನಿಮಗೆ ಸಾಧ್ಯವೆ ? ತದ್ವಿರುದ್ಧವಾಗಿ, ಸಂವಿಧಾನದ 25 ನೇ ಕಲಮನ್ನು ತಿದ್ದುಪಡಿಸಬೇಕೆಂಬ ಅಕಾಲಿದಳದ ಬೇಡಿಕೆಯನ್ನು ಎಲ್ಲಾ ವಿರೋಧ ಪಕ್ಷಗಳೂ ವಿರೋಧಿಸಿದವು. 1984 ರ ಮಾರ್ಚ್ 24 ರಂದು ಸಂತ್ ಲೋಂಗೋವಾಲರಿಗೆ ಬರೆದಪತ್ರದಲ್ಲಿ "ಕೇಂದ್ರ ಸರಕಾರದ ವಿರುದ್ಧ ನಡೆಯುತ್ತಿರುವ ಆಂದೋಲನವನ್ನು ಹಿಂದೂ ವಿರೋಧಿ ಆಂದೋಲನವಾಗಿ ಪರಿವರ್ತಿಸಲಾಗುತ್ತಿದೆ. ಇದು ಪ್ರತ್ಯೇಕತಾವಾದೀ ಖಾಲೀಸ್ಥಾನಿಗಳಿಗೆ ಆಧಾರ ಒದಗಿಸಿಕೊಡುತ್ತದೆ" ಎಂದು ನಾನು ಹೇಳಿದ್ದೆ. ಆದರೆ ಕೇಂದ್ರ ಸರಕಾರ 25 ನೇ ಕಲಮ್‌ನ್ನು ತಿದ್ದುಪಡಿಗೊಳಿಸುವ ಭರವಸೆ ನೀಡಿತು- ಉಗ್ರಗಾಮಿಗಳಿಗೆ ಕುಮ್ಮಕ್ಕು ನೀಡುವುದಕ್ಕೆ ಯಾರು ಹೊಣೆ ಹಾಗೂ ರಾಷ್ಟ್ರ—ವಿರೋಧಿಗಳು ಯಾರು ಎಂದು ನೀವು ಹೇಳ ಬಲ್ಲಿರಾ ? ಅಪಪ್ರಚಾರದಲ್ಲಿ ಪಂಜಾಬ್ ಪರಿಸ್ಥಿತಿಯನ್ನು ಸರಕಾರ ಹೇಗೆ ನಿರ್ವಹಿಸಿ ಪರಿಹಾರ ಕಂಡು ಹಿಡಿಯುವಲ್ಲಿ ವಿರೋಧ ಪಕ್ಷಗಳ ಸಹಕಾರವನ್ನು ಹೇಗೆ ಅದು ನಿರಾಕರಿಸುತ್ತಾ ಬಂತು ಎಂಬುದರ ವಿವರಗಳನ್ನು ಪರಿಶೀಲಿಸಲು ನಾನೀಗ ಹೋಗುತ್ತಿಲ್ಲ. ಆದರೆ ಈ ಎಲ್ಲದರ ಫಲಿತಾಂಶ ಸ್ಪಷ್ಟವಾಗಿದೆ. ನೀವೇನೇ ಹೇಳಿದರೂ, ಇದು ಪಂಜಾಬ್ ರಾಜ್ಯಕ್ಕೂ ಒಳಿತಲ್ಲ, ದೇಶಕ್ಕೂ ಒಳಿತಲ್ಲ ಈ ಅಪಾಯ ಕಾರಿ ಪರಿಸ್ಥಿತಿ ಉಂಟಾಗಬಾರದೆಂದು ನಮ್ಮ ಅಪೇಕ್ಷೆಯಾಗಿತ್ತು. ನಿಮ್ಮ ಈಗಿನ ನಿಲುವನ್ನು ಕಂಡರೆ ಈ ಪ್ರದೇಶದ ಜನರಲ್ಲಿ ವಿಶ್ವಾಸವನ್ನು ಮತ್ತೆ ಮೂಡಿಸಬಹುದು, ದೇಶದ ಐಕ್ಯತೆಯನ್ನು ಬಲಗೊಳಿಸಬಹುದು ಎಂಬ ಆಸೆಯೇನೂ ಮೂಡುವುದಿಲ್ಲ.

(8ನೇ ಪುಟ ನೋಡಿ)

ಇಂದಿರಾ ಹತ್ಯೆ

ಅಮೇರಿಕಾ ಒಳಸಂಚು ಮತ್ತೊಮ್ಮೆ ಬಹಿರಂಗಕ್ಕೆ

ಭಾರತದ ವಿರುದ್ಧ ಅಮೇರಿಕಾ ಸಾಮ್ರಾಜ್ಯಶಾಹಿಗಳ ಒಳಸಂಚಿನ ಗೂಢಜಾಲದ ವಿವರಗಳು ಮತ್ತೊಮ್ಮೆ ಬಯಲಿಗೆ ಬಂದಿದೆ. ಇತ್ತೀಚಿಗೆ ಬಯಲಿಗೆಳೆಯಲ್ಪಟ್ಟ ವಿವರಗಳು, ಇಡೀ ವಿಶ್ವವನ್ನೇ ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿಗಳಿಗೆ ಯಾವ ಮೇರೆಗಳೂ ಇಲ್ಲ. ಡಿಸೆಂಬರ್ 16 ರಂದು ದೆಹಲಿಯ ದಿನ ಪತ್ರಿಕೆ "ಪೆಟ್ರಿಯಟ್" "ಒತ್ತಡದ ಅಡಿಯಲ್ಲಿ ಭಾರತ – ರಾಜಕೀಯ ಸ್ಥಿರತೆಯ ಸಾಧ್ಯತೆಗಳು" ಎಂಬ ಅಮೇರಿಕಾ ವಿದೇಶಾಂಗ ಖಾತೆಯ ಒಂದು ಅಧ್ಯಯನದಿಂದ ಕೆಲವು ಭಾಗಗಳನ್ನು ಆಯ್ದು ಮುದ್ರಿಸಿದೆ. ಈ ಅಧ್ಯಯನ ಸಾಚಾ ಎಂಬುದರ ಬಗ್ಗೆ ಅನುಮಾನವೇ ಇಲ್ಲ. ಏಕೆಂದರೆ ಆ ವಿದೇಶಾಂಗ ಇಲಾಖೆಯೇ ಇದನ್ನು ಒಪ್ಪಿದೆ. ಆ ವಿದೇಶಾಂಗ ಇಲಾಖೆಯ ವಕ್ತಾರರೊಬ್ಬಳು, ಇಂತಹ ಅಧ್ಯಯನಗಳು ಮಾಮೂಲಿ, ಇದರಲ್ಲಿ ರಹಸ್ಯವೇನಿಲ್ಲ, ಇದರ ಪ್ರತಿಗಳು ಪುಸ್ತಕ ಭಂಡಾರದಲ್ಲಿಯೇ ಲಭ್ಯವಾಗಿದ್ದವು ಎಂದು ಅದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದಾಳೆ.

ಆದರೆ "ಪೇಟ್ರಿಯಟ್" ಪತ್ರಿಕೆ "ಇದು ಸುಳ್ಳು" ಎಂದು ನಿರಾಕರಿಸಿದೆ. ಈ ವಕ್ತಾರಳು, ಅಧ್ಯಯನವನ್ನು ಮುದ್ರಿಸಿರಲಿಲ್ಲ, ಕೇವಲ ಕೆಲವೇ ಪ್ರತಿಗಳನ್ನು ಮಾಡಿಸಿ, ಬೇರೆ ಯಾವುದೇ ರಹಸ್ಯ ದಾಖಲೆಯಂತೆ ಪ್ರತಿ ಪ್ರತಿಗೂ ಒಂದು ಸಂಖ್ಯೆ ನೀಡಿ ಕೆಲವೇ ಆಯ್ದ ವ್ಯಕ್ತಿಗಳಿಗೆ ಮಾತ್ರ ನೀಡಲಾಗಿತ್ತು ಎಂಬುದನ್ನು ಮುಚ್ಚಿಡುತ್ತಿದ್ದಾಳೆ ಎಂದು ಹೇಳಿದೆ.

ಈ ರಹಸ್ಯಕ್ಕೆ ಸಾಕಷ್ಟು ಕಾರಣಗಳಿವೆ. ಈ ವರದಿಯ ಒಂದು ಅಧ್ಯಾಯದ ಹೆಸರೇ "ಇಂದಿರಾ ಗಾಂಧಿಯ ಸಾವಿನ ನಂತರದ ಅಧಿಕಾರ ಗ್ರಹಣ". ಎಂದು ಈ ಅಧ್ಯಾಯದಲ್ಲಿ ಶ್ರೀಮತಿಗಾಂಧಿ ಅಧಿಕಾರದಲ್ಲಿದ್ದಾಗಲೇ ಮರಣ ಹೊಂದಿದರೆ, ನಂತರ ಘಟನೆಗಳು ಹಿಡಿಯ ಬಹುದಾದ ದಾರಿ, ಯಾರು ಅಧಿಕಾರ ಸ್ವೀಕಾರ ಮಾಡಬಹುದು, ಕಾಂಗ್ರೆಸ್ ಪಕ್ಷ ಉಳಿಯುತ್ತದೆಯೇ, ರಾಜಕೀಯ ಸ್ಥಿರತೆಯ ಸಾಧ್ಯತೆಗಳೇನು ? ಎಂಬ ಪ್ರಶ್ನೆಗಳ ಬಗ್ಗೆ ಚರ್ಚಿಸಲಾಗಿದೆ.

ಅಮೇರಿಕಾದ ವಿದೇಶಾಂಗ ಖಾತೆ ಈ ಅಧ್ಯಯನವನ್ನು ತೆಗೆದುಕೊಂಡು ಟೆಕ್ಸಾಸ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ರಾಬರ್ಟ್ ಹಾರ್ಡ್‌ಗ್ರೇವರಿಗೆ ನೀಡಲಾಗಿತ್ತು. ಸಿಐಎದ ಕುಪ್ರಸಿದ್ಧ ವ್ಯಕ್ತಿ ಎಡ್‌ವರ್ಡ್ ಗ್ರಿಫಿನ್ ಅವರಿಗೆ ಮಾರ್ಗದರ್ಶನ ಮಾಡಿದ್ದರು. ಇದು ನಿಜವಾಗಿಯೂ ಸಿಐಎ ಉದ್ದೇಶಿಸಿದ ಅಧ್ಯಯನ.

ಈ ಅಧ್ಯಯನದಲ್ಲಿ ಲೋಕಸಭಾ ಚುನಾವಣೆಗಳ ಮೊದಲು ಅಥವಾ ನಂತರ ಇಂದಿರಾ ಸಾವಿನ ಎರಡು ಸಾಧ್ಯತೆಗಳ ಬಗ್ಗೆ ವಿವೇಚಿಸಲಾಗಿದೆ. ಲೋಕಸಭಾ ಚುನಾವಣೆಗಳ ಮೊದಲು ಈ ಸಾವು ಸಂಭವಿಸಿದರೆ ರಾಜೀವರ ಆಯ್ಕೆಯ ಹಾದಿಯಲ್ಲಿ ಹೆಚ್ಚು ಅಡ್ಡಿಗಳುಂಟಾಗುತ್ತವೆಂದು ಅಭಿಪ್ರಾಯ ಪಡಲಾಗಿದೆ.

ಈ ಮೊದಲ ಅಧಿಕಾರ ಹಸ್ತಾಂತರಗಳಲ್ಲಿ [ನೆಹರು ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರ ನಿಧನದ ನಂತರ] ರಾಜ್ಯಗಳ ಮುಖ್ಯ ಮಂತ್ರಿಗಳು, ಕಾಂಗ್ರೆಸ್ ಹೈಕಮಾಂಡ್, ಮುಖ್ಯವಾಗಿ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಆಯ್ಕೆಯ ಬಗ್ಗೆ ಒಮ್ಮತಾಭಿಪ್ರಾಯವನ್ನು ರೂಪಿಸುವುದರಲ್ಲಿ ನಿರ್ಣಾಯಕ ಪಾತ್ರವಹಿಸಿದರು. ವರದಿಯ ಪ್ರಕಾರ, ಈಗ ಕಾಂಗ್ರೆಸ್ ಪಕ್ಷಕ್ಕೆ ತನ್ನನ್ನು ತಾನೇ ಸಮರ್ಥಿಸಿಕೊಳ್ಳಬೇಕಾದ ಪರಿಸ್ಥಿತಿಯೊದಗಿದೆ. ಪಕ್ಷದ ಸಂಘಟನೆ ದುರ್ಬಲವಾಗಿರುವಾಗ, ಮುಖ್ಯಮಂತ್ರಿಗಳೆಲ್ಲರೂ ತಮ್ಮ ಅಧಿಕಾರಕ್ಕಾಗಿ ಇಂದಿರಾರವರ ಮೇಲೆಯೇ ಅವಲಂಬಿತರಾಗಿರುವಾಗ, ಕಾರ್ಯಕಾರಿ ಸಮಿತಿಯಾಗಲಿ, ಮುಖ್ಯಮಂತ್ರಿಗಳಾಗಲಿ ಅಧಿಕಾರ ಹಸ್ತಾಂತರದಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಸಾಧ್ಯವಾಗದು. ಇದರ ನಿರ್ಣಾಯಕರು ಲೋಕಸಭೆಯೊಳಗೇ ಇರುತ್ತಾರೆ.

ಇಂದಿರಾ ಸಾವಿನ ನಂತರದ ದುಃಖ ಮತ್ತು ಗಾಬರಿಯಲ್ಲಿ ಕಾಂಗ್ರೆಸ್ ಎಂಪಿಗಳ ಮೊದಲ ಪ್ರತಿಕ್ರಿಯೆ ಎಂದರೆ ರಾಜೀವಗಾಂಧಿಯ ಸುತ್ತ ನೆರೆಯುವುದು. ಆದರೆ ಈಗ ಲೋಕಸಭೆಯಲ್ಲಿ ಬಹಳ ಜನರ ಬೆಂಬಲ ರಾಜೀವಗಾಂಧಿಗಿಲ್ಲ. ಬಹಳ ಎಂಪಿಗಳಿಗೆ ರಾಜೀವರನ್ನು ಬಿಟ್ಟು ಬೇರೆಯವರನ್ನು ಒಲಿಯುವ ಹೆಚ್ಚಿನ ಸಾಧ್ಯತೆಗಳಿವೆ.

ಆದರೆ ಪಕ್ಷದಲ್ಲಿ ಗುಂಪುಗಳ ಕಚ್ಚಾಟ ಆರಂಭವಾದರೆ ಈ ಪರಿಸ್ಥಿತಿ, ರಾಜೀವರನ್ನು ಗಾದಿಯ ಮೇಲೆ ಕೂರಿಸುವ ಸಾಧ್ಯತೆಗಳಿವೆ. ನಾಯಕತ್ವದ ಬಿಕ್ಕಟ್ಟನ್ನು ಪರಿಹರಿಸಲು ಪಕ್ಷಕ್ಕೆ ಸಾಧ್ಯವಿಲ್ಲದೆ ಹೋದರೆ ಅಥವಾ ಪಕ್ಷದ ಆಯ್ಕೆಯನ್ನು ನಿಷ್ಫಲಗೊಳಿಸುವ ಉದ್ದೇಶದಿಂದಲೇ ಶ್ರೀಮತಿ ಗಾಂಧಿಯವರೇ ಆರಿಸಿದ, ನೆಹರೂ ಮನೆತನಕ್ಕೆ ಚಿರಋಣಿಯಾದ ಅಧ್ಯಕ್ಷ ಜೈಲ್‌ಸಿಂಗ್‌ರವರು ರಾಜೀವಗಾಂಧಿಯವರನ್ನು ಸರ್ಕಾರ ರಚಿಸಲು ಆಹ್ವಾನಿಸಬಹುದು. ಇನ್ನೇನಿಲ್ಲವೆಂದರೂ ಆರಂಭದಲ್ಲಿಯಾದರೂ ಲೋಕಸಭೆಯಲ್ಲಿ ಬಹುಮತವನ್ನು ಗಳಿಸಲು ಹೆಚ್ಚು ಕಷ್ಟವಾಗುವುದಿಲ್ಲ.

ಈ ಅಧ್ಯಯನ ಮತ್ತೊಂದು ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಬಿಡಲಿಲ್ಲ. ಮುಂದಿನ ಪ್ರಧಾನಿಯನ್ನು ಆರಿಸುವುದರಲ್ಲಿ ನಿರ್ಣಾಯಕ ಅಂಶವೆಂದರೆ, ಯಾರು ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ವಿಜಯವನ್ನು ಗಳಿಸಿಕೊಡಬಲ್ಲರು ? ಎಂಬುದು. ಈ ಎಣಿಕೆಯೊಂದೇ ಪಕ್ಷವನ್ನು ಬಹಳ ಮಟ್ಟಿಗೆ ರಾಜೀವರ ಹಿಂದೆ ನೆರೆಯಿಸಬಲ್ಲ ಸಾಧ್ಯತೆ. ತನ್ನ ತಾಯಿಯ ನೆರಳಾದ ರಾಜೀವ್, ತನ್ನ ವಂಶದ ಉತ್ತರಾಧಿಕಾರಿಯಾಗಿ, ನಿರಂತರ ನಾಯಕತ್ವವನ್ನು ನೀಡಬಲ್ಲರು. ನಾಯಕಿಯ ನಷ್ಟದ ತಕ್ಷಣದಲ್ಲಿನ ಅಸ್ಥಿರ ಕ್ಷಣಗಳಲ್ಲಿ ಪ್ರಧಾನಿಯಾಗಿ ರಾಜೀವ ಗಾಂಧಿಯ ಆಯ್ಕೆ, ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರದ ಸಾರವಾದ ರಾಷ್ಟ್ರೈಕ್ಯತೆ ರಾಜಕೀಯ ಸ್ಥಿರತೆಯ ಕಾಳಜಿಗಳಿಗೆ ಪ್ರತಿಸ್ಪಂದಿಸುತ್ತದೆ. ಶ್ರೀಮತಿ ಗಾಂಧಿಯವರ ಮರಣದ ಕೆಲ ದಿನಗಳಲ್ಲಿಯೇ ನಡೆಯುವ ಚುನಾವಣೆಗಳು ಶೋಕದಲ್ಲಿರುವ ರಾಷ್ಟ್ರದಿಂದ ಸಹಾನುಭೂತಿ ಮತಗಳನ್ನು ಸಹಜವಾಗಿಯೇ ಗಳಿಸುತ್ತವೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡ ಈ ವರದಿ ಸೂಚಿಸುತ್ತದೆ. ಆದರೂ ಕಾಂಗ್ರೆಸ್ ಸಂಸದೀಯ ಪಕ್ಷ ರಾಜೀವ್‌ಗಿಂತ ಆಚೆ ಕೈಚಾಚಿ, ಅಳಿದುಳಿದ ಹಿಂದಿನ ತಲೆಮಾರಿನ ಕಾಂಗ್ರೆಸ್ ನಾಯಕರಲ್ಲೊಬ್ಬರನ್ನು ಆರಿಸಬಹುದು.

ಚುನಾವಣೆಯ ನಂತರ ! ವರದಿ ಹೇಳುತ್ತದೆ "ಅಲ್ಪ ಬಹುಮತದ, ಅಥವಾ ಅಲ್ಪ ಸಂಖ್ಯಾತ ಸರಕಾರ ಪ್ರಧಾನಿ ಮತ್ತು ಸರಕಾರಕ್ಕೆ ಕಾಂಗ್ರೆಸ್‌ನ ಒಳ ಗುಂಪುಗಳಿಂದ ಮಾತ್ರವಲ್ಲ, ಹೊರಗಿನ, ಪಕ್ಷವನ್ನು ಒಡೆದು ಹೊಸದೊಂದು ನಾಯಕತ್ವದಡಿಯಲ್ಲಿ ಕಾಂಗ್ರೆಸ್ ಹೆಸರನ್ನು ಉಪಯೋಗಿಸ ಬಯಸುವ ಹೊರಗಿನ ಕೆಲವರಿಂದಲೂ ಸವಾಲನ್ನು ಎದುರಿಸಬೇಕಾಗುತ್ತದೆ. ಕಾಂಗ್ರೆಸ್ ಸರಕಾರ ಬೀಳಲೂ ಬಹುದು ಜನತಾ ನೇತೃತ್ವದ ಸಂಯುಕ್ತ ರಂಗ ಸರಕಾರ, ಕಾಂಗ್ರೆಸ್ ಭಿನ್ನ ಮತೀಯರಿಂದ ಕೂಡಿ ಅಧಿಕಾರಕ್ಕೆ ಬರಬಹುದು. ಆದರೆ ಇಂತಹ ಒಂದು ಸಂಯುಕ್ತ ರಂಗವೇ ಒಳ ಭಿನ್ನಾಭಿಪ್ರಾಯಗಳಿಗೆ, ಪಕ್ಕಾಗಿ ಒಡೆಯುವ ಸಂಭವವಿರುತ್ತದೆ. ಭಾರತ, ಕೇಂದ್ರ ಮಟ್ಟದಲ್ಲಿ ದೀರ್ಘಕಾಲದ ಅಸ್ಥಿರತೆಯ ಅವಧಿಯನ್ನು ಪ್ರವೇಶಿಸುತ್ತದೆ."

ಚುನಾವಣೆಯ ನಂತರ ಇಂದಿರಾ ಹತ್ಯೆಯಾದರೆ ? ಈ ವರದಿಯ ಪ್ರಕಾರ "ಇಲ್ಲಿಯವರೆಗೂ, ಮುಂದಿನ ಲೋಕಸಭಾ ಚುನಾವಣೆಯ ಮೊದಲು ಇಂದಿರಾ ಸಾವು ಸಂಭವಿಸುವುದರ ಪರಿಣಾಮಗಳ ವಿವಿಧ ಸಾಧ್ಯತೆಗಳ ಬಗ್ಗೆ ನಾವು ಚರ್ಚಿಸಿದ್ದೇವೆ. ಚುನಾವಣೆಯ ನಂತರ ಆಕೆ ಸಾಯುವುದಾದರೆ ರಾಜೀವ್ ಉತ್ತರಾಧಿಕಾರಿಯಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಪಕ್ಷ ಒಡೆಯುವ ಸಾಧ್ಯತೆಗಳೂ ಕಡಿಮೆಯಾಗುತ್ತವೆ."

ಈ ಸಿ. ಐ. ಎ. ಪ್ರಚೋದಿತ ಅಧ್ಯಯನದ ಪ್ರಕಾರ ಲೋಕಸಭಾ ಚುನಾವಣೆಯ ನಂತರ ಇಂದಿರಾ ಸತ್ತರೆ ಅಸ್ಥಿರತೆಯ ಸಂಭವ ಕಡಿಮೆ. ಚುನಾವಣೆಗೆ ಮೊದಲೇ ಸತ್ತರೆ ದೀರ್ಘಕಾಲದ ಅಸ್ಥಿರತೆಗೆ ಕಾರಣವಾಗುತ್ತದೆ. ವರದಿಯೇ ಹೇಳುತ್ತದೆ, ಮುಂದಿನ ಲೋಕಸಭಾ ಚುನಾವಣೆಯ ಮೊದಲು ಇದ್ದಕ್ಕಿದ್ದಂತೆ ಶ್ರೀಮತಿ ಗಾಂಧಿ ಸತ್ತರೆ, ರಾಜೀವನ ಆಯ್ಕೆಯ ಅವಕಾಶಗಳು ಬಹಳ ಕಠಿಣವಾಗಿರುತ್ತವೆ.

ಅಕ್ಟೋಬರ್ 31 ಕ್ಕೆ ಶ್ರೀಮತಿ ಇಂದಿರಾ ಗಾಂಧಿ ಸಾಯಬಹುದೆಂದು ಯಾರೂ ನೆನಸಿರಲಿಲ್ಲ. ಆದರೆ ಆಕೆ ಲೋಕಸಭಾ ಚುನಾವಣೆಯ ಮೊದಲು ಮತ್ತು ಇದ್ದಕ್ಕಿದ್ದಂತೆ ನಿಧನರಾದರು. ಈ ಘೋರ ಹತ್ಯೆಯ ಎಂಟು ವಾರ ಮೊದಲು ಈ ವರದಿ ಸಿ. ಐ. ಎ. ಮತ್ತು ವಿದೇಶಾಂಗ ಇಲಾಖೆಯ ಕೈಯಲ್ಲಿತ್ತು. ಚುನಾವಣೆಗೆ ಮೊದಲೇ ಇಂದಿರಾ ಹತ್ಯೆ ಮಾಡಿದರೆ ಮಾತ್ರ ಅಸ್ಥಿರತೆಯನ್ನು ನಿರ್ಮಾಣ ಮಾಡಬಹುದು ಎಂಬ ಈ ವರದಿಯ ಆಧಾರದ ಮೇಲೆ ಅವರು ಕ್ರಮ ಕೈಗೊಂಡರೆ ? ಸಿ. ಐ. ಎ. ಹಂತಕರನ್ನು ಪ್ರೇರೇಪಿಸಿತ್ತೆ ? ಸಿ ಐ ಎ ಇದುವರೆಗೂ ನಿರ್ಮಿಸಿರುವ ದಾಖಲೆಗಳನ್ನು ನೋಡಿದರೆ ಯಾರೊಬ್ಬರೂ "ಹೌದು" ಎನ್ನಲು ಹಿಂದೆ ಮುಂದೆ ನೋಡರು.

ಸಾಮ್ರಾಜ್ಯ ಶಾಹಿಗಳ ಒಳಸಂಚಿನ ಬಗ್ಗೆ ಬಹಳ ದೀರ್ಘ ಕಾಲದಿಂದ ಎಚ್ಚರಿಸುತ್ತಾ ಬಂದಿರುವ ನಮ್ಮಂತಹವರಿಗೆ ಈ ಸಿ ಐ ಎ ಪ್ರೇರೇಪಿತ ವರದಿ ಆಶ್ಚರ್ಯವನ್ನುಂಟು ಮಾಡುವುದಿಲ್ಲ.

ಅಸ್ಸಾಂ ಮತ್ತು ಇತರ ಈಶಾನ್ಯ ಭಾರತದ ಗುಡ್ಡಗಾಡುಗಳಲ್ಲಿ ಬ್ರಹ್ಮಪುತ್ರ ನದಿಯಿಂದಾಚೆಗೆ ಪ್ರತ್ಯೇಕವಾದಿ ಚಳುವಳಿಗಳನ್ನು ಬೆಳೆಸಿ ಉತ್ತೇಜಿಸುತ್ತಿವೆ ಸಾಮ್ರಾಜ್ಯಶಾಹಿ ಶಕ್ತಿಗಳು. ಆ ಪ್ರದೇಶವನ್ನು ಭಾರತದಿಂದ ಪ್ರತ್ಯೇಕಿಸುವ, ಅಲ್ಲಿ ಒಂದು ಕೈಗೊಂಬೆ ಸರಕಾರವನ್ನು ಸೃಷ್ಟಿಸುವ ಸಿಐಎ ಯೋಜನೆ "ಪ್ರಾಜೆಕ್ಟ್ ಬ್ರಹ್ಮಪುತ್ರ" ವನ್ನು ಅನೇಕ ವರ್ಷಗಳ ಹಿಂದೆಯೇ ಬಯಲಿಗೆಳೆಯಲಾಯಿತು.

ನಂತರ ಹೊರ ಬಂತು ಕಿರ್ಕ್‌ಪ್ಯಾಟ್ರಿಕ್ ಟಿಪ್ಪಣಿಗಳು. ವಿಶ್ವ ಸಂಸ್ಥೆಯಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಇವರು ಭಾರತವನ್ನು ಛಿದ್ರ ಛಿದ್ರ ಮಾಡಬೇಕಾದ ಅವಶ್ಯಕತೆಯನ್ನು ಈ ಟಿಪ್ಪಣಿಯಲ್ಲಿ ಪ್ರತಿಪಾದಿಸಿದ್ದಾರೆ.

ಭಾರತದಲ್ಲಿರುವ ಅಮೇರಿಕಾ ರಾಯಭಾರಿ, ಖಲಿಸ್ತಾನ್ ಚಳುವಳಿ ಒಂದು ಸ್ವಾತಂತ್ರ್ಯ ಚಳುವಳಿ ಎಂದು ಬಣ್ಣಿಸಿದರೆ, ಸಾಮ್ರಾಜ್ಯ ಶಾಹಿಗಳು ಜಗಜಿತ್ ಚೌಹಣ್‌ಗಳಿಗೆ ಗಂಗಾಸಿಂಗ್ ಥಿಲ್ಲೋನ್‌ಗಳಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡುತ್ತಿದ್ದಾರೆ. ಪಾಕೀಸ್ತಾನ್ ಸರಕಾರ ಮತ್ತು ಸಿಐಎ ಭಯೋತ್ಪಾದಕ ಸಿಖ್ ಪ್ರತ್ಯೇಕವಾದಿಗಳಿಗೆ ತರಬೇತಿ ನೀಡುತ್ತಿದ್ದಾರೆ. ಸ್ವರ್ಣ ಮಂದಿರದಲ್ಲಿ ಹೊರ ದೇಶದಿಂದ ಬಂದ ಶಸ್ತ್ರಾಸ್ತ್ರಗಳ ರಾಶಿ, ಡಾಲರುಗಳ ರಾಶಿ ಇದಕ್ಕೆ ಸ್ಪಷ್ಟ ನಿದರ್ಶನ. ಈ ಸಾಮ್ರಾಜ್ಯಶಾಹಿಗಳು ಭಾರತದಲ್ಲಿ ಎಲ್ಲ ರೀತಿಯ ಪ್ರತ್ಯೇಕವಾದಿಗಳಿಗೆ, ದೇಶ ಭಂಜಕರಿಗೆ ಅವರು ಹಿಂದೂ ಮತೀಯ ವಾದಿಗಳಿರಲಿ, ಮುಸ್ಲಿಂ ಮೂಲಭೂತವಾದಿಗಳಿರಲಿ, ಸಿಖ್ ಉಗ್ರಗಾಮಿಗಳಿರಲಿ, ಕ್ರೈಸ್ತ ಮಿಷನರಿಗಳಿರಲಿ – ಎಲ್ಲರಿಗೂ ಪ್ರೋತ್ಸಾಹ, ಸಹಾಯ ನೀಡುತ್ತಿದ್ದಾರೆ.

ಅಳಿದ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರಿಗೆ, ಅವರ ಹತ್ತಿರದ ಒಡನಾಡಿಗಳಿಗೆ ಈ ಒಳಸಂಚಿನ ಹೆಚ್ಚಿನ ವಿವರಗಳು ತಿಳಿದಿದ್ದವು. ಇಂದಿರಾಗಾಂಧಿಯವರ ಕೊನೆಯ ಭಾಷಣ ಮತ್ತು ಅವರು ಬರೆಯಲಾರಂಭಿಸಿದ್ದ ಉಯಿಲು ಇವನ್ನು ಸೂಚಿಸುತ್ತವೆ. ಆದರೆ ಅವುಗಳನ್ನು ಬಹಿರಂಗಗೊಳಿಸಿ ಜನಗಳನ್ನು ನೆಚ್ಚಿ ನಮ್ಮ ನಿಜವಾದ ಶತ್ರು ಯಾರು ಎಂದು ಗುರುತಿಸಲು ಸಹಾಯ ಮಾಡಿದ್ದರೆ, ಜನತೆಯನ್ನೂ ಸಾಮ್ರಾಜ್ಯಶಾಹಿ ಒಳಸಂಚುಗಾರರ, ಅವರ ಬಾಡಿಗೆ ಬಂಟರ ವಿರುದ್ಧ ನೆರೆಯಿಸಿದ್ದರೆ ಪರಿಣಾಮವೇ ಬೇರೆಯಾಗುತ್ತಿತ್ತು. ಆದರೆ ಈ ಕೆಲಸವನ್ನು ಮಾಡದ ಕಾಂಗ್ರೆಸ್ ಪಕ್ಷ, ತನ್ನ ಸ್ವಾರ್ಥ, ಸಂದರ್ಭ ಸಾಧಕತನದಿಂದ ಐಕ್ಯಭಂಜಕ, ಮತೀಯ, ಛಿದ್ರಕಾರಿ ಶಕ್ತಿಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಿತು. ತನ್ನ ಸಂಕುಚಿತ ಚುನಾವಣಾ ಲಾಭಗಳಿಗಾಗಿ ಅವುಗಳ ಜೊತೆ ಕೈ ಜೋಡಿಸಿತು ○

ಪುತ್ತೂರು ತಾಲ್ಲೂಕು

ಸಿ. ಪಿ. ಐ. (ಎಂ) ನ ಸಭೆ

ಪುತ್ತೂರು ತಾಲ್ಲೂಕ್ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆಯು ತಾ- 11-12-1985 ರಂದು ಕಾಂ ಶಿವಪ್ಪಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಮುಖ್ಯ ಅತಿಥಿಗಳಾಗಿ ಪಕ್ಷದ ಸದಸ್ಯರು, ಹಾಗೂ ರೈತ ಕಾರ್ಮಿಕ ಮುಖಂಡರೂ ಆದ ಕಾಂ ಎಂ. ಕೆ. ಭಟ್‌ರು ಆಗಮಿಸಿದ್ದರು.

ಆರಂಭದಲ್ಲಿ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಂ ಎಂ.ಕೆ. ಭಟ್‌ರವರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕಾಂಗ್ರೆಸ್ ಪಕ್ಷವು ಕಳೆದ 35 ವರ್ಷಗಳಿಂದಲೂ, ಬಡವರನ್ನು ಬಡತನದಲ್ಲೇ ಇಟ್ಟುಕೊಂಡು ಶ್ರೀಮಂತರನ್ನು ಇನ್ನಷ್ಟು ಹೆಚ್ಚು ಹೆಚ್ಚು ಶ್ರೀಮಂತರನ್ನಾಗಿ ಮಾಡುತ್ತಾ ಬಡವರನ್ನು ಇನ್ನಷ್ಟು ಶೋಷಿಸಲು ಚುನಾವಣೆಯು ಅನುಕೂಲಮಾಡಿ ಕೊಡುತ್ತಿದೆ. ಬಡವರನ್ನು ಬಡತನ ರೇಖೆಯಿಂದ ಎತ್ತುವ, ಬಡತನ ನೀಗುವ ಸುಳ್ಳು ಘೋಷಣೆ ಪೊಳ್ಳು ಆಶ್ವಾಸನೆಗಳನ್ನು ಕೊಡುತ್ತಾ ಬಡವರನ್ನು ವಂಚಿಸುತ್ತಲೇ ಚುನಾವಣೆಯಲ್ಲಿ ಜಯಗಳಿಸಿಕೊಂಡು ಬರುತ್ತಿತ್ತು. ಕಾಂಗ್ರೆಸ್, ಬಿ. ಜೆ. ಪಿ. ಗಳೆರಡೂ ಶ್ರೀಮಂತ ವರ್ಗದ ರಾಜಕೀಯ ಪಕ್ಷಗಳಾಗಿವೆ. ಅವುಗಳೆರಡರ ವರ್ಗ ಗುಣ ಒಂದೇ. ಇದನ್ನು ರೈತ ಕಾರ್ಮಿಕರು ಅರಿತುಕೊಳ್ಳಬೇಕು ಎಂದು ಹೇಳಿದರು.

ಕರ್ನಾಟದಲ್ಲಿ ಜನತಾ ಸರಕಾರ ಮುಂದುವರಿಯಬೇಕು. ಅದಕ್ಕೆ ರೈತ, ಕಾರ್ಮಿಕರು ಬೆಂಬಲಕೊಡಬೇಕು. ಜತೆಯಲ್ಲೇ ರಾಷ್ಟ್ರೀಯ ಮಟ್ಟದಲ್ಲಿ ರೈತ ಕಾರ್ಮಿಕರಿಗೆ ಅನುಕೂಲವಾಗುವಂತಹ ಜನಹಿತ ಧೋರಣೆಗಳನ್ನು ಜ್ಯಾರಿಗೊಳಿಸುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಬೆಂಬಲವನ್ನೀಯಬೇಕೆಂದು ಕರೆಯಿತ್ತರು. ಬಿ. ಜೆ. ಪಿ. ಯಂತ ಮತೀಯ ಹಾಗೂ ಕೋಮುವಾದಿ ಪಕ್ಷವನ್ನು ತಿರಸ್ಕರಿಸಬೇಕು. ಕಾಂಗ್ರೆಸ್‌ನ್ನು ಅಧಿಕಾರದಿಂದ ಕೆಳಗೆ ಇಳಿಸಲು ರೈತ ಕಾರ್ಮಿಕರು ಈ ಚುನಾವಣೆಯಲ್ಲಿ ಶ್ರಮಿಸುವುದು ಅಗತ್ಯವೆಂದು ಅವರು ಅಭಿಪ್ರಾಯಪಟ್ಟರು.

ಕಾ|| ಬಿ. ರಾಮಕೃಷ್ಣ ರವರು ಮಾತನಾಡುತ್ತಾ, ಭಾರತದ ಪ್ರಧಾನಿಯನ್ನೇ ರಕ್ಷಿಸಿಕೊಂಡು ಬರಲಾರದ ಕಾಂಗ್ರೆಸ್ (ಐ) ಗೆ ನಮ್ಮ ದೇಶದ ಜನರನ್ನು, ದೇಶದ ಸಾರ್ವಭೌಮತೆಯನ್ನು ರಕ್ಷಿಸುವ ಕಾಪಾಡುವ ನೈತಿಕ ಹಕ್ಕು ಎಲ್ಲಿದೆ ? ಜಾತೀಯ, ಮತೀಯ ಶಕ್ತಿಗಳು ರಾಜಕೀಯವನ್ನು ತಮ್ಮ ಹತೋಟಿಗೆ ತೆಗೆದುಕೊಂಡಿರುವ ಪರಿಣಾಮವೇ ಇಂದು ದೇಶದಲ್ಲಿ ಪ್ರಕ್ಷುಬ್ದ ವಾತಾವರಣಕ್ಕೆ ಕಾರಣವಾಗಿದೆ. ನಮ್ಮನ್ನು ಆಳುವ ವರ್ಗ ಈ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿವೆ. ಧರ್ಮ ಮತ, ಭಾಷೆಗಳು ರಾಜಕೀಯದೊಳಗೆ ಹಸ್ತಕ್ಷೇಪ ಮಾಡಲೇಬಾರದು. ಆದರೆ, ದುರಂತವೆಂದರೆ ನಮ್ಮ ರಾಷ್ಟ್ರ ಇಂದು ಈ ಶಕ್ತಿಗಳ ಸಂಪೂರ್ಣ ಕೈಗೊಂಬೆಯಾಗಿದೆ ಎಂದರು.

ಜನತಾ ಸರಕಾರವು ಬಡವರು ಆಕ್ರಮಿಸಿಕೊಂಡಿರುವ ಒತ್ತುವರಿ ಮಾಡಿರುವ ಭೂಮಿಯನ್ನು ಅವರ ಹೆಸರಿಗೆ ಖಾಯಂಗೊಳಿಸಿ, ಹಕ್ಕು ಪತ್ರ ನೀಡಲು ತೆಗೆದುಕೊಂಡಿರುವ ನಿರ್ಣಯವನ್ನು ಕಾನೂನು ಮೂಲಕ ಕೂಡಲೇ ಜ್ಯಾರಿಗೊಳಿಸಬೇಕು.

ಕಾರ್ಯಕ್ರಮದ ಕೊನೆಗೆ ಕಾ|| ಶಿವಪ್ಪ ಗೌಡರು ಮಾತನಾಡಿ, ಧನ್ಯವಾದಗಳನ್ನರ್ಪಿಸಿದರು :

ಅಭಿನಂದನೆ

ಉಡುಪಿ ಲೋಕ ಸಭಾ ಕ್ಷೇತ್ರದಲ್ಲಿ ಸಿ ಪಿ ಐ [ಎಂ] ಅಭ್ಯರ್ಥಿಯ ಪರವಾಗಿ ಹಗಲಿರುಳೂ ದುಡಿದ ಪಕ್ಷದ ಕಾರ್ಯಕರ್ತರಿಗೂ, ಹಿತೈಷಿಗಳಿಗೂ ಹಾಗೂ ಮತ ನೀಡಿದ ಪ್ರಜ್ಞಾವಂತ ನಾಗರೀಕರಿಗೆ ಸಿ ಪಿ ಐ (ಎಂ)ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕಾ. ಕೆ. ಆರ್. ಶ್ರೀಯಾನ್ ಅಭಿನಂದಿಸಿದ್ದಾರೆ.

ಡಿ. ವೈ. ಎಫ್. ಐ. ನ 4ನೇ ವಾರ್ಷಿಕೋತ್ಸವ

ಡಿ. ವೈ. ಎಫ್. ಐ. ಬೆಂಗಳೂರು ಜಿಲ್ಲಾ ಸಮಿತಿಯ ಆಸ್ರಯದಲ್ಲಿ "ಡಿ.ವೈ ಎಫ್. ಐ. ನ 4ನೇ ವಾರ್ಷಿಕೋತ್ಸವ" ಸಮಾರಂಭವು ದಿನಾಂಕ 9-12-84 ರಂದು ಶ್ರೀ ರಾಮಪುರದ ಸಾಯಿಬಾಬ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಪ್ರಸಾಕ್ತ ಸಂದರ್ಭದಲ್ಲಿ ಯುವಕರು ವಹಿಸ ಬೇಕಾದ ಪಾತ್ರದ ಬಗ್ಗೆ ತಮ್ಮ ಉದ್ಘಾಟನ ಭಾಷಣದಲ್ಲಿ ರಾಜ್ಯ ಸಮಿತಿಯ ಉಪಾದ್ಯಕ್ಷರಾದ ಕಾ. ಸತ್ಯನಾರಾಯಣರವರು ಸೂಕ್ಷ್ಮವಾಗಿ ಪ್ರಸ್ತಾಪಿಸಿದರು.

ಪ್ರಸ್ತುತ ಕಾನೂನು ವ್ಯವಸ್ಥೆಯಲ್ಲಿ ನಿರುದ್ಯೋಗಿ ಯುವಜನತೆಗೆ, ವಿದ್ಯಾರ್ಥಿಗಳಿಗೆ, ಮತ್ತು ರೈತ ಕಾರ್ಮಿಕರಿಗೆ ಯಾವುದೇ ಪರಿಹಾರವಿಲ್ಲ ಎಂದು ಹೇಳಿದ ಪ್ರಗತಿಪರ ವಕೀಲರಾದ ಕಾ. ನಾಗ ಮೋಹನ್ ದಾಸ್‌ರವರು ನಮ್ಮ ದೇಶದ ಕಾನೂನು ವ್ಯವಸ್ಥೆ ಮೂಲಭೂತವಾಗಿ ಬದಲಾವಣೆ ಯಾಗಬೇಕೆಂದರು.

ದೇಶ ಸ್ವತಂತ್ರಗೊಂಡು 37 ವರ್ಷಗಳು ಕಳೆದರೂ ಸ್ವಾತಂತ್ರ ಹೋರಾಟಗಾರರು ಕಂಡ ಕನಸು ನನಸಾಗಿಯೇ ಉಳಿದಿದೆ ಎಂದ ಜನಕರಾಜ್‌ರವರು ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣ ಕ್ರಮದಲ್ಲಿ ವರ್ಗ ಮತ್ತು ಕೋಮು ಭಾವನೆಯನ್ನು ವ್ಯವಸ್ಥಿತ ರೀತಿಯಲ್ಲಿ ಆಳುವ ವರ್ಗ ಅಳವಡಿಸಿದೆ ಎಂದರು.

ಯುವಕರು ಸಮಾಜದ ಅವಿಭಾಜ್ಯ ಅಂಗ ಮತ್ತು ಸಮಾಜದಲ್ಲಿ ಇತರೆ ಜನ ವಿಭಾಗ ಅನುಭವಿಸುತ್ತಿರುವ ಸಮಸ್ಯೆಗಳ ಪ್ರತಿರೂಪವೆ ಯುವಜನರ ಸಮಸ್ಯೆಗಳು ಎಂದು ಶ್ರೀ ರಾಮಪುರ ಶಾಖೆಯ ಅಧ್ಯಕ್ಷರಾದ ಕಾ. ಶ್ರೀನಿವಾಸ್ ರವರು ಹೇಳಿದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೆಂಗಳೂರು ಜಲ್ಲೆಯ ಮುಖಂಡರಾದ ಕಾ. ಪಿ. ಕೆ. ಸುಬ್ರಮಣಿಯವರು, ಎಸ್. ಎಫ್. ಐ. ನ ಕಾ. ಶಾಂತಕುಮಾರಿ ಯವರು, ಎ.ಆರ್.ಡಿ.ಯು. ಪ್ರಧಾನ ಕಾರ್ಯದರ್ಶಿಗಳಾದ ಕಾ. ಎ. ವಿ. ರಮೇಶ್ ರವರು ಹಾಗೂ ಮಿನರ್ವಮಿಲ್ಸ್‌ನ ಕಾ. ಮಣಿ ಯವರು ಸಭೆಗೆ ಶುಭಾಶಯ ಕೋರಿ ಮಾತನಾಡಿದರು.

ಡಿ ವೈ ಎಫ್ ಐ ನ ಸಾಂಸ್ಕೃತಿಕ ತಂಡದ ಮುಖಂಡರಾದ ಕಾ.ಟಿ. ಕೃಷ್ಣ ಮೂರ್ತಿಯವರು ಕೆಲವು ಕ್ರಾಂತಿ ಗೀತೆಗಳನ್ನು ಹಾಡಿ ಸಭೆಯನ್ನು ಸ್ವಾಗತಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀರಾಮಪುರ ಶಾಖೆಯ ಕಾರ್ಯದರ್ಶಿಗಳಾದ ಕಾ. ಆರ್. ಗುರುಸ್ವಾಮಿ ವಹಿಸಿದ್ದರು. ಶ್ರೀ ಸಾಯಿಬಾಬ ನಗರ ಸಮಿತಿಯ ಸಂಚಾಲಕರಾದ ಕಾ. ಶಂತೀಲ್ ವೇಲ್ ರವರು ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಡಿ ವೈ ಎಫ್ ಐ ಕಾರ್ಯಕರ್ತರು ನಡೆಸುತ್ತಿರುವ ರಾತ್ರಿ ಉಚಿತ ಪಾಠ ಶಾಲೆಯ ಮಕ್ಕಳಿಂದ "ಕತ್ತೆ ಮತ್ತು ಧರ್ಮ" ಎಂಬ ಕಿರು ನೃತ್ಯ ನಾಟಕವನ್ನು ಅಭಿನಯಿಸಲಾಯಿತು.

ಕಾಂಗ್ರೈನಿಂದ ಹಲ್ಲೆ

15.12.84 ರಂದು ಸಿಂಧನೂರಿನ ಸುಕಾಲ್‌ಪೇಟೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಹಮಾಲರ ಸಂಘ, ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಡರೇಶನ್, ಸಮುದಾಯ ಸಂಘಟನೆಗಳು ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಜಂಟಿ ಸಭೆಯನ್ನು ಜರುಗಿಸುತ್ತಿದ್ದಾಗ, ಕಾಂಗ್ರೈ ಗೂಂಡಾಗಳು ಸಭೆಯಲ್ಲಿ ಗಲಾಟೆ ಮಾಡಿದ್ದಲ್ಲದೆ, ಕಾರ್ಯಕರ್ತರ ಮೇಲೆ ಹಲ್ಲೆಯನ್ನು ಎಸಗಿದ್ದಾರೆ.

ಈ ಹಲ್ಲೆಗೆ ಸಿಂಧನೂರು ತಾಲೂಕ್ ಕಾಂಗ್ರೈ ಸಮಿತಿ ಅಧ್ಯಕ್ಷರಾದ ಕೆ. ವಿರೂಪಾಕ್ಷಪ್ಪ, ನಗರಸಭೆ ಉಪಾಧ್ಯಕ್ಷರಾದ ಕೆ. ನಾಗಪ್ಪ ನವರು ಕುಮ್ಮಕ್ಕು ಕೊಟ್ಟಿದ್ದಾರೆ.

ಈ ಹಲ್ಲೆಯನ್ನು ಹಮಾಲರ ಸಂಘವು ತೀವ್ರವಾಗಿ ಖಂಡಿಸಿದೆ.

ಡಿ. ವೈ. ಎಫ್. ಐ. ನಿಂದ ಶ್ರೀ ರಾಂಪುರಂ ಪೋಲಿಸ್ ಠಾಣೆಗೆ ಘೇರಾವ್

ದಿ. 25.12.84 ರಂದುಕಾಂಗ್ರೆಸ್ ಕಾರ್ಯಕರ್ತರು - ಡಿ.ವೈ.ಎಫ್.ಐ. ನ ಆರ್. ಜಿ. ಐ. ಕಾಲೋನಿ ಸಂಚಾಲಕರಾದ ಗೋಪಾಲಕೃಷ್ಣ ರವರ ಮೇಲೆ ಜನತಾ ಪಕ್ಷದ ಪರ ಪ್ರಚಾರ ಮಾಡಿದ್ದನ್ನು ವಿರೋಧಿಸಿ ಹಲ್ಲೆ ಮಾಡಲು ಪ್ರಯತ್ನಿಸಿದ್ದನ್ನು ಕುರಿತು ಶ್ರೀರಾಂಪುರಂ ಠಾಣೆಗೆ ದೂರು ನೀಡಲು ಹೋದಾಗ ಠಾಣೆಯ ಎ.ಎಸ್.ಐ. ತಮ್ಮಯ್ಯ ಎಂಬುವವರು ಸಂಘಟನೆಯನ್ನು ಹೊಲಸು ಮಾತುಗಳಿಂದ ಬೈದು ಕಾರ್ಯಕರ್ತರನ್ನು ಥಳಿಸಿದ್ದನ್ನು ಖಂಡಿಸಿ 150 ಜನ ಕಾರ್ಯಕರ್ತರು ಮೆರವಣಿಗೆಯಿಂದ ಠಾಣೆಯನ್ನು ಘೇರಾವ್ ಮಾಡಿ ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ ಮನವಿಯನ್ನು ಅರ್ಪಿಸಿದರು. ನಂತರ ಠಾಣೆಯ ಮುಂದುಗಡೆ ನಡೆದ ಸಭೆಯಲ್ಲಿ ಪೋಲಿಸರ ದೌರ್ಜನ್ಯವನ್ನು ಖಂಡಿಸಿ ಸ್ಥಳೀಯ ಸಮಿತಿಯ ಅಧ್ಯಕ್ಷರಾದ ಶ್ರೀನಿವಾಸ್, ಎಸ್.ಎಫ್.ಐ. ನಿಂದ ಶಿವಶಂಕರ್ ಮತ್ತು ಸ್ಥಳೀಯ ಸಿ.ಪಿ.ಐ. (ಎಂ) ನ ಕಾರ್ಯದರ್ಶಿಗಳಾದ ಪಿ. ಕೆ. ಸುಬ್ರಮಣಿಯವರು ಮಾತನಾಡಿದರು.

[6ನೇ ಪುಟದಿಂದ]

ಪ್ರಧಾನಮಂತ್ರಿಯಾಗಿ ಹಾಗೂ ಕಾಂಗ್ರೆಸ್(ಐ)ನ ಅಧ್ಯಕ್ಷರಾಗಿ ಚುನಾವಣಾ ಪ್ರಚಾರಗಳಲ್ಲಿ ನಿಮ್ಮಿಂದ ಜನತೆ ನಿರೀಕ್ಷಿಸುವುದು ವಿವಿಧ ಕ್ಷೇತ್ರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ [ಐ) ಸರಕಾರ ಏನೇನು ಮಾಡಿತೆಂಬುದರ ವಿವರ. ಆದರ ಬದಲು ನೀವು ಎಂದೂ ಸಾಬೀತು ಪಡಿಸಲಾಗದ ಸುಳ್ಳಿನ ಅಪಪ್ರಚಾರವನ್ನು ಸಿ.ಪಿ.ಐ. (ಎಂ) ವಿರುದ್ಧ ನಡೆಸುತ್ತಿದ್ದೀರಿ. ನೀವು ಈ ದೂಷಣೆಯ ಅಪಪ್ರಚಾರವನ್ನು ನಿಲ್ಲಿಸಬೇಕು ಅಥವಾ ನಮ್ಮ ಹೇಳಿಕೆಗಳನ್ನು ಉದ್ಧರಿಸಿಯೋ ಅಥವಾ ಈ ಪತ್ರದಲ್ಲಿ ನಾನು ಕೊಟ್ಟಿರುವ ಹೇಳಿಕೆಗೆ ಸವಾಲೊಡ್ಡಿಯೋ ನಿಮ್ಮ ಆಪಾದನೆಗಳನ್ನು ಸಾಬೀತುಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K. V. Temple Street, Sultanpet. B-53 Phone : 24154

Editor ; P. Ramachandra Rao Managing Editor : N. K. Upadhyaya